ಕರ್ನಾಟಕದ ಜನಪದ ವಾದ್ಯಗಳು

ಡಾ| ಜೀ. ಶಂ. ಪರಮಶಿವಯ್ಯ

402

ಕರ್ನಾಟಕದ ಜನಪದ ವಾದ್ಯಗಳು

ಡಾ. ಜೀ. ಶಂ. ಪರಮಶಿವಯ್ಯ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು-560 009

KARNATAKADA JANAPADA VADYAGALU–a monograph on folk musical instruments of Karnataka written in Kannada by Dr. J. S. Paramashivaiah. Published by P. N. Kamat, IBH Prakashana, 5th Main Road, Gandhinagar, Bangalore-560 009.

ಬೆಲೆ ರೂ. 2-00

Copyright © 1980 by the Publisher.

ಮುಖಪುಟ : ಚಂದ್ರಶೇಖರ್

ಒಳ ಚಿತ್ರಗಳು : ವಿ. ಆರ್. ತಿಪ್ಪೇಸ್ವಾಮಿ

ಮೊದಲ ಮುದ್ರಣ : 1980. ಪ್ರಕಾಶಕರು : ಪಿ.ಎನ್. ಕಾಮತ್ ಐಬಿಎಚ್ ಪ್ರಕಾಶನ ಐದನೆಯ ಮುಖ್ಯರಸ್ತೆ, ಗಾಂಧಿನಗರ ಬೆಂಗಳೂರು 560 009 ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

Paper used for printing this book was made available by the Government of India at concessional rate.

೧

ನದಿ ಹರಿಯುವಾಗ ಜುಳುಜಳು ನಾದ ಬರುತ್ತದೆ. ಜಲ ಪಾತವಾಗಿ ಧುಮುಕುವಾಗ ಕಿವಿ ಬಿರಿಯುವ ಮೊರೆತ ಕೇಳಿ ಬರುತ್ತದೆ. ಗಾಳಿ ಬೀಸುವಾಗ ಮರದ ಎಲೆಗಳು ಅಲುಗಿ ಏನೋ ಒಂದು ಬಗೆಯ ಅವ್ಯಕ್ತ ಸಂಗೀತ ಕೇಳಿ ಬರುತ್ತದೆ. ಹಕ್ಕಿಗಳು ಚಿಲಿಪಿಲಿಗುಡುತ್ತವೆ. ಕೋಗಿಲೆ, ತೇನೆ, ಕಾಜಾಣ ಗಳು ತಮ್ಮ ಮಧುರ ಕಂಠದಲ್ಲಿ ಹಾಡುತ್ತವೆ. ಪ್ರಕೃತಿ ನಾನಾ ರೂಪದಲ್ಲಿ ಸಂಗೀತವನ್ನು ಹಾಡಿ ಆನಂದವನ್ನು ಸೃಷ್ಟಿಸುತ್ತದೆ. ನಮ್ಮ ಕಣ್ಣಿಗೆ ಕಾಣದಂತೆ ಗಂಧರ್ವಗಾನ ನಿಸರ್ಗದ ಎಲ್ಲೆಡೆಯೂ ಕೇಳಿಬರುತ್ತದೆ. ದೇವರು ನಿಸರ್ಗವನ್ನು ಒಂದು ವಾದ್ಯವನ್ನಾಗಿ ಮಾಡಿಕೊಂಡು ನುಡಿಸುವಂತೆ ನಮಗೆ ಭಾಸ ವಾಗುತ್ತದೆ. ಸೃಷ್ಟಿಯ ಈ ಕೌತುಕ ಯಾರನ್ನು ಸೋಜಿಗ ಗೊಳಿಸುವುದಿಲ್ಲ! ಸಂಗೀತ ಪ್ರಕೃತಿಯನ್ನು ಅನುಕರಿಸಿಯೇ ಹುಟ್ಟಿಕೊಂಡಿರಬೇಕು.

ಸಂಗೀತ ಎಲ್ಲರಿಗೂ ಪ್ರಿಯವಾದುದು. ಅದರಲ್ಲಿ ಹಾಡು ಗಾರಿಕೆ ಮತ್ತು ವಾದ್ಯಸಂಗೀತ ಎಂದು ಎರಡು ಬಗೆ. ಹಾಡು ಗಾರಿಕೆಯಷ್ಟೇ ಪ್ರಾಚೀನವಾದುದು ವಾದ್ಯಸಂಗೀತ. ನಾರದ ತುಂಬುರರಂಥ ದೇವಗಾಯಕರು ಸದಾ ವಾದ್ಯಗಳನ್ನು ಹಿಡಿದೇ ಪರಮಾತ್ಮನ ಸಂತೃಪ್ತಿಗಾಗಿ ಹಾಡುತ್ತಾರೆ. ವಿದ್ಯೆಯ ಅಧಿದೈವ ಸರಸ್ವತಿಯ ಕೈಯಲ್ಲಿ ವೀಣೆ ಇದ್ದೇ ಇರುತ್ತದೆ. ಬ್ರಹ್ಮನಿಗೆ ಪ್ರಿಯ ವಾದ ವಾದ್ಯ ಮೃದಂಗ. ಶಿವನಿಗೆ ಡಮರುಗ, ಕೃಷ್ಣನಿಗೆ ಕೊಳಲು, ವಿಷ್ಣುವಿನ ಕೈಯಲ್ಲಿ ಶಂಖ.

ಗಂದರ್ವರು ತಮ್ಮ ಸಂಗೀತಕ್ಕೆ ಹೆಸರಾದವರು. ಹೀಗೆ ದೇವಾನುದೇವತೆಗಳೂ ಸಂಗೀತ ಪ್ರಿಯರಾಗಿ ಚಿತ್ರಿತರಾಗಿ ದ್ದಾರೆ. ಮಾನವ ಸಂಸ್ಕೃತಿಯಲ್ಲಿ ಅತ್ಯಂತ ಪ್ರಾಚೀನ ಕಾಲ ದಿಂದಲೂ ಸಂಗೀತ ಉಳಿದು ಬಂದಿದೆ.

ಸಂಗೀತದ ಮುಖ್ಯ ಅಂಗ ವಾದ್ಯ. ವಾದ್ಯದ ಹಿನ್ನೆಲೆ ಯಿಲ್ಲದ ಸಂಗೀತ ವಿರಳ. ವೀಣೆ, ಮೃದಂಗ, ತಾಳ, ತಂಬೂರಿ ಮೊದಲಾದ ವಾದ್ಯಗಳು ಸಾವಿರಾರು ವರ್ಷಗಳಿಂದ ಮುಖ್ಯ ಸಂಗೀತವಾದ್ಯಗಳಾಗಿ ಉಳಿದು ಬಂದಿವೆ. ಇವುಗಳ ಜೊತೆಗೆ ಅನೇಕ ಬಗೆಯ ವಾದ್ಯಗಳು ಕಂಡು ಬರುತ್ತವೆ. ಇವುಗಳನ್ನು ಮುಖ್ಯವಾದ್ಯಗಳು, ಶ್ರುತಿವಾದ್ಯಗಳು, ಚರ್ಮವಾದ್ಯಗಳು, ತಂತೀವಾದ್ಯಗಳು, ತಾಳವಾದ್ಯಗಳು ಎಂದು ಮುಂತಾಗಿ ಅನೇಕ ಬಗೆಗಳಲ್ಲಿ ವಿಭಜಿಸಿಕೊಳ್ಳುತ್ತಾರೆ. ಹಾಡುಗಾರಿಕೆಗೆ ಪಕ್ಕವಾದ್ಯ ಗಳಾಗಿ ಕೆಲವು ವಾದ್ಯಗಳು ಬಳಕೆಯಾದರೆ, ವಾದ್ಯಸಂಗೀತ ಕ್ಕಾಗಿಯೇ ಮೀಸಲಾದ ವಾದ್ಯಗಳೂ ಇವೆ. ವೀಣೆ, ಪಿಟೀಲು, ಸಿತಾರ್, ಸರೋಡ್, ನಾಗಸ್ವರ, ಮೃದಂಗ, ತಬಲ, ತಂಬೂರಿ, ತಾಳ, ಗೋಟುವಾದ್ಯ, ಕೊಳಲು, ಘಟವಾದ್ಯ ಮುಂತಾದ ವಾದ್ಯಗಳು ಪ್ರೌಢ ಸಂಗೀತದಲ್ಲಿ ಬಳಕೆಯಾಗಿವೆ. ಸಾಕಷ್ಟು ಜನಪ್ರಿಯವಾಗಿವೆ. ಹೆಸರಾಂತ ಸಂಗೀತಗಾರರು ಈ ಪರಂಪರೆ ಯಲ್ಲಿ ಕೀರ್ತಿಗಳಿಸಿದ್ದಾರೆ. ವೀಣೆ ಶೇಷಣ್ಣನವರು, ಪಿಟೀಲು ಚೌಡಯ್ಯನವರು, ತಬಲದ ಪುಟ್ಟಸ್ವಾಮಯ್ಯನವರು ಮೊದ ಲಾದವರು ಒಂದೊಂದು ವಾದ್ಯಸಂಗೀತವನ್ನು ಬೆಳೆಸಿದರು. ಕರ್ನಾಟಕದ ಈ ಸಂಗೀತ ವಿದ್ವಾಂಸರ ಹೆಸರುಗಳನ್ನು ಯಾರು ಕೇಳಿಲ್ಲ! ರಾಜ ಮಹಾರಾಜರುಗಳ ಪ್ರೋತ್ಸಾಹವಿದ್ದ ಕಾಲದಲ್ಲಿ ಸಂಗೀತ ಉನ್ನತಿಯನ್ನು ಸಾಧಿಸಿತು. ಕರ್ನಾಟಕ ಈಗಲೂ ಸಂಗೀತದ ತೌರೂರೆನಿಸಿದೆ.

ಸಂಗೀತ ವಾದ್ಯಗಳಲ್ಲಿ ಎರಡು ಪ್ರಧಾನ ವರ್ಗಗಳು ಕಂಡುಬರುತ್ತವೆ: ೧. ಪ್ರೌಢ ಸಂಪ್ರದಾಯದ ವಾದ್ಯಗಳು, ೨. ಜನಪದ ಸಂಪ್ರದಾಯದ ವಾದ್ಯಗಳು. ಈ ಎರಡು ಸಂಪ್ರದಾಯಗಳಲ್ಲಿ ಜನಪದ ವಾದ್ಯಗಳು ಹೆಚ್ಚು ಪ್ರಾಚೀನವಾದುವು. ವೈವಿಧ್ಯದ ದೃಷ್ಟಿಯಿಂದಲೂ ಅವುಗಳದೇ ಮೇಲುಗೈ. ಪ್ರೌಢ ಸಂಪ್ರದಾಯದ ವಾದ್ಯಗಳೂ ಒಂದು ಕಾಲಕ್ಕೆ ಜನಪದ ವಾದ್ಯಗಳೇ ಆಗಿದ್ದು ಅನಂತರ ಬೆಳವಣಿಗೆಯನ್ನು ಪಡೆದು ಕೊಂಡಿರುತ್ತವೆ. ಈಗಲೂ ಪ್ರೌಢ ಸಂಪ್ರದಾಯದಲ್ಲಿ ಕಂಡು ಬರುವ ಕೊಳಲು, (ಏಕತಾರಿ) ತಾಳ, ಗೆಜ್ಜೆ, ಶಹನಾಯಿ ಮೊದಲಾದುವು ಜನಪದ ವಾದ್ಯಗಳೇ ಆಗಿ ಹೆಚ್ಚಾಗಿ ಬಳಕೆ ಗೊಳ್ಳುತ್ತಿವೆ.

ಕರ್ನಾಟಕದಲ್ಲಿ ಜನಪದ ವಾದ್ಯಗಳು ಅಪಾರ ಸಂಖ್ಯೆಯಲ್ಲಿ ಕಂಡುಬರುತ್ತವೆ. ಜನಪದ ವೃತ್ತಿಗಾಯಕರಲ್ಲಿ, ಇತರ ವೃತ್ತಿಕಾರರಲ್ಲಿ ಇವುಗಳ ಬಳಕೆ ಹೆಚ್ಚು. ಜನರಿಗೆ ಮನರಂಜನೆಯನ್ನು ಒದಗಿಸಲು ಈ ವಾದ್ಯಗಳನ್ನು ಅವರು ಬಳಸಿಕೊಳ್ಳುತ್ತಾರೆ. ಮಂಗಳ ಕಾರ್ಯಗಳಲ್ಲಿ, ಧಾರ್ಮಿಕ ವಿಧಿಗಳಲ್ಲಿ, ದೇವರ ಆರಾಧನೆಯಲ್ಲಿ ಬಳಸುವ ಬೇರೆ ಬೇರೆ ರೀತಿಯ ವಾದ್ಯಗಳೂ ಹಲವು ಬಗೆಗಳಲ್ಲಿ ಕಂಡುಬರುತ್ತವೆ. ಜನಗಳಲ್ಲಿ ವೀರೋತ್ಸಾಹವನ್ನು ತುಂಬಿ ಹುರಿದುಂಬಿಸಲು ಬಳಸುತ್ತಿದ್ದ ರಣವಾದ್ಯಗಳೂ ಕಂಡುಬರುತ್ತವೆ. ಆದುದರಿಂದ ಬಳಕೆಯ ಸಂದರ್ಭವನ್ನು ಅನುಸರಿಸಿ ಮೂರು ಮುಖ್ಯ ಪ್ರಕಾರಗಳನ್ನು ಮಾಡಿಕೊಳ್ಳಬಹುದು.

೧. ವೃತ್ತಿಗಾಯಕರ ಹಾಗೂ ವೃತ್ತಿಕಾರರ ವಾದ್ಯಗಳು
೨. ಧಾರ್ಮಿಕ ಸಂದರ್ಭಗಳಲ್ಲಿ ಬಳಸುವ ವಾದ್ಯಗಳು
೩. ರಣವಾದ್ಯಗಳು

ವೃತ್ತಿಗಾಯಕರು ಜನಪದ ಕಾವ್ಯಗಳನ್ನು ಹಾಡಿ ಜೀವಿಸುವವರು. ತಮ್ಮ ಮೇಳಗಳಲ್ಲಿ ಅವರು ಆಯಾ ಸಂಪ್ರದಾಯಕ್ಕೆ ಸಂಬಂಧಿಸಿದ ವಾದ್ಯಗಳನ್ನು ಬಳಸುತ್ತಾರೆ. ಈ ವಾದ್ಯಗಳಲ್ಲಿ ಕೆಲವು ದೇವರ ಹೆಸರಿನಲ್ಲಿ ಬಳಕೆಗೊಳ್ಳುತ್ತವೆ. ಆಯಾ ಸಂಪ್ರದಾಯದ ದೇವರು ಬಳಸುತ್ತಿದ್ದ ವಾದ್ಯಗಳು ಎಂಬ ನಂಬಿಕೆಯೂ ಇರುತ್ತದೆ. ಆದುದರಿಂದ ಇವುಗಳನ್ನು ಮನೆಯಲ್ಲಿ ದೇವರಂತೆಯೇ ಪೂಜಿಸುತ್ತಾರೆ. ದೇವರ ಪೂಜಾ ಕಾರ್ಯಗಳಲ್ಲಿ ಈ ವಾದ್ಯಗಳನ್ನು ನುಡಿಸುತ್ತಾರೆ. ಕಂಸಾಳೆ, ಚೌಡಿಕೆ ಮೊದಲಾದ ವಾದ್ಯಗಳು ಇಲ್ಲಿ ಮುಖ್ಯವಾದುವು. ಈ ವಾದ್ಯಗಳನ್ನು ನುಡಿಸುತ್ತ ಅವರವರ ದೇವರ ಕಾವ್ಯಗಳನ್ನು ಅವರು ಭಕ್ತಿ ತನ್ಮಯತೆಯಿಂದ ಹಾಡುತ್ತಾರೆ.

ಲೌಕಿಕ ವೃತ್ತಿಗಾಯಕರು ಅನೇಕ ಬಗೆಯ ವಾದ್ಯಗಳನ್ನು ಬಳಸುತ್ತಾರೆ. ಒಂದೊಂದು ಸಂಪ್ರದಾಯದವರೂ ತಾವು ಬಳಸುವ ವಾದ್ಯವನ್ನು ಪವಿತ್ರವಾದುದೆಂದೇ ಭಾವಿಸುತ್ತಾರೆ. ತಮ್ಮ ಕಲೆಯ ಮೂಲದೇವತೆ ಸರಸ್ವತಿ ಎಂದೇ ನಂಬುತ್ತಾರೆ. ಅವರೂ ಸಹ ಈ ವಾದ್ಯಗಳನ್ನು ಮುಟ್ಟಿ ಶರಣು ಮಾಡಿಕೊಂಡು ಅನಂತರ ಹಾಡಲು ತೊಡಗುವುದನ್ನು ಕಾಣಬಹುದು. ವೃತ್ತಿಗಾಯಕರ ಪರಂಪರೆಯಲ್ಲಿ ಕಂಡುಬರುವ ಮುಖ್ಯ ವಾದ್ಯಗಳನ್ನು ಇಲ್ಲಿ ಪಟ್ಟಿಮಾಡಬಹುದು :

ದೇವರಗುಡ್ಡರು	....	ಕಂಸಾಳೆ
ನೀಲಗಾರರು, ತಂಬೂರಿಯವರು	...	ತಂಬೂರಿ
ಗಣೆಯವರು	....	ಗಣೆ
ಗೊರವರು	....	ಕೊಳಲು, ಡಮರುಗ
ಚೌಡಿಕೆಯವರು, ಗೊಂದಲಿಗರು	....	ಚೌಡಿಕೆ
ದೊಂಬಿದಾಸರು, ತೆಲುಗು ಜಂಗಮರು	....	ಏಕತಾರಿ

ಕರಪಾಲದವರು .... ಗುಮ್ಮಟೆ
ಹೆಳವರು ... ಗಂಟೆ
ಕಿನ್ನರಿ ಜೋಗಿಗಳು .... ಕಿನ್ನರಿ

ಈ ಮುಖ್ಯ ವಾದ್ಯಗಳ ಜೊತೆಗೆ, ವೃತ್ತಿಗಾಯಕರು ಕೆಲವು ಪೋಷಕ ವಾದ್ಯಗಳನ್ನೂ ಬಳಸುತ್ತಾರೆ. ಅವು ಹಿಮ್ಮೇಳದವರು ಹಿಡಿಯುವ ವಾದ್ಯಗಳು ; ದಮ್ಮಡಿ, ತಾಳ, ಗೆಜ್ಜೆ, ಗಗ್ಗರ, ಢಕ್ಕೆ, ಗುಮ್ಮಟೆ ಮೊದಲಾದುವು ಇಲ್ಲಿ ಮುಖ್ಯ ವಾದುವು. ಈ ವಾದ್ಯಗಳನ್ನು ಬಳಸಿ ವೃತ್ತಿಗಾಯಕರು ತಮ್ಮ ಮೇಳಗಳಿಗೆ ಒಂದು ವಿಶೇಷ ಆಕರ್ಷಣೆಯನ್ನು ತಂದುಕೊಳ್ಳು ತ್ತಾರೆ. ವಿಶಿಷ್ಟ ಸಂಗೀತದ ಗುಂಗಿನಲ್ಲಿ ನಮ್ಮನ್ನು ಮುಳುಗಿಸು ತ್ತಾರೆ. ಇವುಗಳ ಹಿನ್ನೆಲೆಯಲ್ಲಿ ಅವರ ಕಾವ್ಯಗಳು ಅಪೂರ್ವ ವಾಗಿ ಶೋಭಿಸುತ್ತವೆ. ನಮ್ಮ ಮನಸ್ಸನ್ನು ಗೆದ್ದುಕೊಳ್ಳುತ್ತವೆ.

ಜನಪದ ವಾದ್ಯಗಳು ವೃತ್ತಿಗಾಯಕರಲ್ಲಿ ಬಳಕೆಗೊಂಡಂ ತೆಯೇ ಅನೇಕ ಬಗೆಯ ವೃತ್ತಿಕಾರರಲ್ಲಿಯೂ ಕಂಡುಬರು ತ್ತವೆ. ನಾನಾ ಬಗೆಯ ವಾದ್ಯಗಳನ್ನು ಬಳಸಿ, ಕೌಶಲಗಳನ್ನು ತೋರಿ, ಹಾಡಿ, ಕುಣಿದು ಈ ವೃತ್ತಿಕಾರರು ಜನರಿಗೆ ಮನ ರಂಜನೆಯನ್ನು ಒದಗಿಸುತ್ತಾರೆ. ವಂಶಪಾರಂಪರ್ಯವಾಗಿ ಇವರ ಪಾಲಿಗೆ ಇದು ಒಂದು ವೃತ್ತಿಯಾಗಿ ಬಂದಿರುತ್ತದೆ. ಅಲೆಮಾರಿ ಗಳಾದ ಇವರು ಊರಿಂದೂರಿಗೆ ಹೋಗಿ, ಪ್ರದರ್ಶನಗಳನ್ನು ನೀಡಿ, ಜನರನ್ನು ನಲಿಸಿ ದವಸಧಾನ್ಯಗಳನ್ನು ಉಡುಗೊರೆ ಗಳನ್ನು ಪಡೆದುಕೊಳ್ಳುತ್ತಾರೆ. ಇವರ ಪ್ರದರ್ಶನಗಳಲ್ಲಿ ವಾದ್ಯಗಳ ಬಳಕೆಯೂ ಒಂದು ಮುಖ್ಯ ಅಂಗವಾಗಿ ಕಂಡು ಬರುತ್ತದೆ. ಏಕೆಂದರೆ ವಾದ್ಯಸಂಗೀತ ಅವರ ಪ್ರದರ್ಶನಕ್ಕೆ ಒಂದು ಒಳ್ಳೆಯ ಆವರಣವನ್ನು ಕಲ್ಪಿಸಬೇಕು. ಹಾವಾಡಿಗರು, ದೊಂಬರು, ಕಿಳ್ಳೇಕ್ಯಾತರು, ಮೋಡಿಯವರು, ಕೋಲೆ ಬಸವ

ನವರು, ವೇಷಗಾರರು, ಬೀದಿಮಾರಿಯುವರು ಮೊದಲಾದವರು ಬಳಸುವ ವಾದ್ಯಗಳಲ್ಲಿ ಚರ್ಮ ವಾದ್ಯಗಳೂ, ತಾಳ ವಾದ್ಯಗಳೂ, ಊದು ವಾದ್ಯಗಳೂ, ಶ್ರುತಿ ವಾದ್ಯಗಳೂ ಸೇರಿರುತ್ತವೆ. ಇವುಗಳ ಜೊತೆಗೆ ಕೇವಲ ವಾದ್ಯಮೇಳಗಳನ್ನೇ ನಡೆಸಿ ಮನರಂಜನೆಯನ್ನು ಒದಗಿಸುವವರೂ ಇದ್ದಾರೆ. ಕರ್ನಾಟಕದ ಹಲಗೆಯಮೇಳ, ಕರಡೆಮೇಳ, ಚಿಟ್‌ಮೇಳ ಮೊದಲಾದುವು ತುಂಬ ಜನಪ್ರಿಯವಾದ ವಾದ್ಯಮೇಳಗಳಾಗಿವೆ. ಓಲಗ, ಕರಡೆ, ಸಮೇಳಗಳ ಮೂಲಕ ನಾನಾ ವಿನ್ಯಾಸದ ನಾದ ತರಂಗಗಳನ್ನು ಸೃಷ್ಟಿಸಿ ಈ ಮೇಳದವರು ಅಪೂರ್ವ ಕೌಶಲವನ್ನು ತೋರುತ್ತಾರೆ. ಕರಡೆಮೇಳ, ಚಿಟ್‌ಮೇಳಗಳು ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಒಂದೇ ಮೂಲಕ್ಕೆ ಸಂಬಂಧಪಡುತ್ತವೆ. ಚಿಟ್‌ಮೇಳ ದಕ್ಷಿಣ ಕರ್ನಾಟಕದ ಕಲೆಯಾದರೆ, ಕರಡೇ ಮಜಲು ಉತ್ತರ ಕರ್ನಾಟಕದ ಕಲೆ. ಇವುಗಳ ಸಾಲಿನಲ್ಲೇ ಉತ್ತರ ಕರ್ನಾಟಕದ ಹಲಗೇಮೇಳವೂ ಬರುತ್ತದೆ. ಹಲಗೆ ದಕ್ಷಿಣ ಕರ್ನಾಟಕದ ತಮ್ಮಟೆ. ಕೇವಲ ತಮ್ಮಟೆಗಳನ್ನೇ ಬಳಸಿ ಅವುಗಳನ್ನು ವಿವಿಧ ಗತ್ತಿನಲ್ಲಿ ಬಡಿಯುತ್ತ ಎಂಟು ಅಥವಾ ಹತ್ತು ಮಂದಿ ಕಲಾವಿದರು ನರ್ತಿಸುತ್ತಾರೆ. ಕೆಲವು ಕಡೆ ಕೇಂದ್ರ ವಾದ್ಯವಾಗಿ "ಹಲಗೆ"ಯನ್ನು ಬಳಸಿ ಮೌರಿ, ನಾಗಸ್ವರ, ಕರಡೆ ಮೊದಲಾದ ವಾದ್ಯಗಳಿಂದ ಮೇಳವನ್ನು ಸಮರಸಗೊಳಿಸಿ ನಾದಲೋಕವನ್ನು ಸೃಷ್ಟಿಸುತ್ತಾರೆ. ಹಲಗೆಯುವನು ನಡುವೆ ನಿಂತು ಉಳಿದ ವಾದ್ಯಗಳ ಗತ್ತಿಗೆ ಅದನ್ನು ಬಡಿಯುತ್ತ ತನ್ಮಯನಾಗುತ್ತಾನೆ. ವಾದ್ಯಸಂಗೀತದ ಅಪೂರ್ವ ಅನುಭವವನ್ನು ಈ ವಾದಕರು ತಂದುಕೊಡುತ್ತಾರೆ. ವಾದ್ಯಮೇಳಗಳಲ್ಲಿ ಶುದ್ಧ ಚರ್ಮವಾದ್ಯ ಸಂಪ್ರದಾಯಕ್ಕೆ ಸೇರಿದ "ಡೊಳ್ಳುಮೇಳ" ಒಂದು ಗಂಡುಕಲೆ. ಬೀರೇಶ್ವರನ ಭಕ್ತರಾದ ಹಾಲುಮತದವ

ರಲ್ಲಿ ಈ ಕಲೆ ಹೆಚ್ಚಾಗಿ ಕಂಡುಬರುತ್ತದೆ. ಸೊಂಟಕ್ಕೆ ದೊಡ್ಡ ದೊಡ್ಡ ಡೊಳ್ಳುಗಳನ್ನು ಕಟ್ಟಿಕೊಂಡು ಈ ಕಲಾವಿದರು ಅವನ್ನು ಬಡಿಯುತ್ತ ವಿವಿಧ ಗತ್ತಿನಲ್ಲಿ ಕುಣಿಯುವ ವೈಖರಿ ಅದ್ಭುತವಾದುದು !

ಕೆಲವು ವೃತ್ತಿಕಾರರು ಶ್ರುತಿ ಮತ್ತು ಓಲಗಗಳನ್ನು ಏಕ ಕಾಲದಲ್ಲಿ ಒಬ್ಬನೇ ನುಡಿಸುವ ಕೌಶಲವನ್ನೂ ಮೆರೆಯುತ್ತಾರೆ. ಕೆಲವರು ಮೂಗಿನ ಮೂಲಕ ಶ್ರುತಿಯನ್ನು ಊದುವ ವೈಖರಿ ಯನ್ನು ತೋರಿ ಜನರನ್ನು ಬೆರಗು ಗೊಳಿಸುತ್ತಾರೆ. ನಾನಾ ರೀತಿಯ ನಾಟಿ ರಾಗಗಳನ್ನು ಮುಖವೀಣೆಯೆಂಬ ಕಿರುವಾದ್ಯದ ಮೂಲಕ ನುಡಿಸಿ ಕೆಲವರು ರಂಜನೆಯನ್ನುಂಟುಮಾಡುತ್ತಾರೆ. ಈ ಕಲಾವಿದರಲ್ಲಿ ಕೆಲವರು ಪಂಚವಾದ್ಯವೆಂಬ ಚರ್ಮದ ಊದುವಾದ್ಯವನ್ನು ಒಬ್ಬನೇ ವಿವಿಧ ರೀತಿಯಲ್ಲಿ ನುಡಿಸಿ ಮೋಜನ್ನುಂಟುಮಾಡುತ್ತಾನೆ.

ಧಾರ್ಮಿಕ ಸಂದರ್ಭಗಳಲ್ಲಿ ಬಳಕೆಯಾಗುವ ಜನಪದ ವಾದ್ಯಗಳು ಹಲವು ಬಗೆಗಳಲ್ಲಿ ಕಂಡುಬರುತ್ತವೆ. ಡೋಲು, ಹರೆ, ತಾಳ, ಜಲ್ಲರಿ, ತಮ್ಮಟೆ, ಮೌರಿ, ನಾಗಸ್ವರಗಳು, ಕರಡೆ— ಮೊದಲಾದ ವಾದ್ಯಗಳು ದೇವರ ಉತ್ಸವ, ಮೆರವಣಿಗೆ, ಮದುವೆ ಮೊದಲಾದ ಮಂಗಳ ಸಂದರ್ಭಗಳಲ್ಲಿ ಬಳಕೆಯಾಗು ತ್ತವೆ. ಈ ವಾದ್ಯಮೇಳದಲ್ಲಿ ತಜ್ಞತೆಯನ್ನು ಸಾಧಿಸಿಕೊಂಡ ತಂಡಗಳವರು ವಿಶೇಷ ಆಹ್ವಾನದ ಮೇಲೆ ಬಂದು ಉತ್ಸವಾದಿ ಗಳಲ್ಲಿ ಭಾಗವಹಿಸುತ್ತಾರೆ. ಇವರಿಲ್ಲದೆ ಯಾವ ಮಂಗಳ ಕಾರ್ಯವೂ ನಡೆಯುವಂತಿಲ್ಲ. ಮಂಗಳ ವಾದ್ಯಗಳು ಮೊಳ ಗುವ ವೈಖರಿಯೇ ನೆರೆದ ಮಂದಿಯಲ್ಲಿ ಭಕ್ತಿ, ಆವೇಶಗಳನ್ನು ತರುತ್ತದೆ. ಅನೇಕ ದೇವಾಲಯಗಳಿಗೆ ಮೀಸಲಾದ ಹೆಬ್ಬರೆ ಗಳು, ಕಂಚಿನ ಹರೆಗಳು, ವಿಶಿಷ್ಟ ಸ್ವರೂಪದಿಂದ ಕೂಡಿದ್ದು

ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಳಕೆಗೊಳ್ಳುತ್ತವೆ. ನಗಾರಿ, ನೌಬತ್ತುಗಳು ಅರಮನೆ, ಗುರುಮನೆಗಳಲ್ಲಿ ಗರಡಿಗಳಲ್ಲಿ ಬಳಕೆ ಗೊಳ್ಳುವ ದೊಡ್ಡ ರಣವಾದ್ಯಗಳು. ದಿನದ ಬೇರೆ ಬೇರೆ ಸಂದರ್ಭಗಳನ್ನು ಸೂಚಿಸಲು, ಈ ವಾದ್ಯಗಳನ್ನು ಬಡಿಯುಲಾಗು ವುದು. ಶ್ರೀಮಠದ ಗುರುಗಳು ಸಂಚಾರ ಹೊರಟಾಗ ನಂದಿಯು ಮೇಲೆ ನಗಾರಿಯನ್ನು ಇಟ್ಟು ಬಡಿಯುತ್ತಾ ಸಾಗುವರು. ಬಹಳ ದೂರದವರೆಗೆ ಈ ನಗಾರಿಯ ನಾದ ಕೇಳಿಬರುವುದು.

ಯಕ್ಷಗಾನ, ಬಯಲಾಟಗಳಲ್ಲಿ, ಗೊಂಬೆ ಮೇಳಗಳಲ್ಲಿ ಬಳಸುವ ವಾದ್ಯಗಳೂ ಗಮನಾರ್ಹವಾದುವು. ತಾಳ, ಮದ್ದಳೆ, ಜಾಗಟೆ ಹಾಗೂ ಚಂಡೆಗಳನ್ನು ಪಡುವಲಪಾಯ ಯಕ್ಷಗಾನ ಮೇಳಗಳಲ್ಲಿ ಬಳಸುತ್ತಾರೆ. ತಾಳ-ಮದ್ದಳೆಗಳು ಯಕ್ಷಗಾನ ನಾಟಕದ ಸಂಗೀತ, ನೃತ್ಯಗಳನ್ನು ನಿರ್ದೇಶಿಸಿದರೆ, ಚಂಡೆ ವಿಶಿಷ್ಟ ಆವರಣವನ್ನು ಸೃಷ್ಟಿಸುತ್ತದೆ. ಪಡುವಲಪಾಯ ಸಂಪ್ರದಾ ಯದ ತೆಂಕತಿಟ್ಟು ಯಕ್ಷಗಾನ ಪದ್ಧತಿಯಲ್ಲಿ ತಾಳಕ್ಕೆ ಬದಲಾಗಿ ಜಾಗಟೆಯನ್ನು ಬಳಸುತ್ತಾರೆ. ಬಯಲುಸೀಮೆಯ ಮೂಡಲ ಪಾಯ ಯಕ್ಷಗಾನ ಮೇಳಗಳಲ್ಲಿಯೂ ತಾಳ, ಮದ್ದಳೆಗಳು ಅನಿವಾರ್ಯ. ಇವುಗಳ ಜೊತೆಗೆ "ಮುಖವೀಣೆ" ಎಂಬ ಊದು ವಾದ್ಯವನ್ನು ಇಲ್ಲಿ ಬಳಸುತ್ತಾರೆ. ಹಿಮ್ಮೇಳದ ಸ್ಥಾನದಲ್ಲಿ 'ಮುಖವೀಣೆ' ತನ್ನದೇ ಆದ ಸ್ಥಾನವನ್ನು ವಹಿಸಿ, ನಾಟಕಕ್ಕೆ ವಿಶೇಷ ಕಳೆಯನ್ನು ತಂದುಕೊಡುತ್ತದೆ. ತಾಳ, ಮದ್ದಳೆ, ಮುಖವೀಣೆಗಳ ನಾದ ವೈಖರಿಯಲ್ಲಿ ಯಕ್ಷಗಾನ ಮೇಳಗಳು ಒಂದು ಯಕ್ಷಲೋಕವನ್ನೇ ಸೃಷ್ಟಿಸುತ್ತವೆ.

ತೊಗಲುಗೊಂಬೆಯಾಟದ ಕಿಳ್ಳೇಕ್ಯಾತರು ಅಥವ ಗೊಂಬೇ ರಾಮರು ಶ್ರುತಿಗಾಗಿ ತಮ್ಮದೇ ಆದ ಒಂದು ಸರಳ ವಾದ್ಯ ವನ್ನು ಮಾಡಿಕೊಂಡಿದ್ದಾರೆ. ಒಂದು ಕಂಚಿನ ತಟ್ಟೆಯನ್ನು

ನೆಲದಮೇಲೆ ಬೋರಲಾಗಿ ಹಾಕುತ್ತಾರೆ. ಅದರ ಮಧ್ಯದಲ್ಲಿ ಸ್ವಲ್ಪ ಮೇಣವನ್ನು ಅಂಟಿಸುತ್ತಾರೆ. ಆ ಮೇಣದ ಮೇಲೆ ಒಂದು ತೆಳುವಾದ ಜೋಳದ ಕಡ್ಡಿಯನ್ನು ಅಥವಾ ದೊಡ್ಡ ಹಂಚಿಯ ಕಡ್ಡಿಯನ್ನು ನಿಲ್ಲಿಸುತ್ತಾರೆ. ಎರಡು ಬೆರಳುಗಳಿಂದ ಅದನ್ನು ಉಜ್ಜಿದರೆ ಒಂದುಬಗೆಯ ನಾದ ಬರುತ್ತದೆ. ಇದು ಅವರ ಗಾಯನಕ್ಕೆ ಶ್ರುತಿ.

ಜನಪದ ನೃತ್ಯ ಮೇಳಗಳು ಕರ್ನಾಟಕದ ಎಲ್ಲ ಕಡೆಗಳಲ್ಲೂ ಕಂಡುಬರುತ್ತವೆ. ಕೋಲಾಟದಂಥ ಸರಳ ನೃತ್ಯದಿಂದ ಆರಂಭವಾಗಿ ಸೋಮನ ಕುಣಿತದಂಥ ಸಂಕೀರ್ಣ ಮೇಳಗಳ ವರೆಗೆ ಅಪಾರ ಸಂಖ್ಯೆಯ ವಾದ್ಯಗಳು ಬಳಕೆಗೊಳ್ಳುತ್ತವೆ. ಕೋಲಾಟದಲ್ಲಿ ಮೇಲು ನೋಟಕ್ಕೆ ಯಾವ ವಾದ್ಯವನ್ನೂ ಬಳಸುವಂತೆ ತೋರುವುದಿಲ್ಲ. ಆದರೆ ಅಲ್ಲಿ ಕೋಲುಗಳೇ ತಮ್ಮ ಕಣಿಕಣಿ ನಾದದಿಂದ ವಿಶಿಷ್ಟವಾದ್ಯಗಳಾಗಿ ಪರಿಣಮಿಸುತ್ತವೆ. ಕಾಲಗೆಜ್ಜೆ ಮತ್ತು ದಮ್ಮಡಿಗಳೂ ಇಲ್ಲಿ ಮುಖ್ಯವಾದುವೇ. ರಂಗದ ಕುಣಿತ, ಮಾರಿ ಕುಣಿತ, ಪೂಜಾ ಕುಣಿತ, ಕರಗದ ಕುಣಿತ ಮೊದಲಾದ ಹೆಜ್ಜೆ ಮೇಳಗಳಲ್ಲಿ ತಮ್ಮಟೆಯುದೇ ಪ್ರಧಾನ ಪಾತ್ರ. ಬೇರೆ ಬೇರೆ ರೀತಿಯ ತಾಳಗಳಿಗೆ ಅನುಗುಣವಾಗಿ ತಮ್ಮಟೆಯನ್ನು ಬಡಿಯಲಾಗುವುದು. ಅದರ ಗತ್ತಿಗೆ ತಕ್ಕಂತೆ ಕಲಾವಿದರು ಹೆಜ್ಜೆಯನ್ನು ಹಾಕುತ್ತ ವಿವಿಧ ವಿನ್ಯಾಸದಲ್ಲಿ ಕುಣಿಯುವರು. ಸೋಮನ ಕುಣಿತದಲ್ಲಿ ಹರೆ, ಡೋಲು ಮೊದಲಾದ ವಾದ್ಯಗಳು ಮುಖ್ಯವಾದುವು. ಇಲ್ಲಿ ಓಲಗದ ಪಾತ್ರವೂ ವಿಶಿಷ್ಟವಾದುದೇ. ಪಟಕುಣಿತದಲ್ಲಿ ನಗಾರಿ ಮುಖ್ಯವಾದುದು. ಉದ್ದವಾದ ಪಟಗಳನ್ನು ಹಿಡಿದು ಹತ್ತು ಅಥವಾ ಹನ್ನೆರಡು ಮಂದಿ ಕಲಾವಿದರು ನರ್ತಿಸುವಾಗ ನಗಾರಿಯ ಜೊತೆಗೆ ತಮ್ಮಟೆಗಳೂ ಬೆರೆಯುತ್ತವೆ. ನಂದಿಯ ಕೋಲಿನ

ಕುಣಿತದಲ್ಲಿಯೂ ಇತರ ವಾದ್ಯಗಳ ಜೊತೆಗೆ ತಮ್ಮಟೆ ಸೇರಿಕೊಳ್ಳಲೇಬೇಕು.

೨

ಜನಪದ ಜೀವನದಲ್ಲಿ ವಾದ್ಯಗಳನ್ನು ಬಳಸದ ಸಂತೋಷದ ಸಂದರ್ಭವೇ ವಿರಳವೆನ್ನಬೇಕು. ಎಲ್ಲ ಬಗೆಯ ಶುಭ ಕಾರ್ಯಗಳಲ್ಲಿ ವಾದ್ಯಗಳು ಬೇಕು; ಎಲ್ಲ ಬಗೆಯ ಮನರಂಜನೆಗಳಲ್ಲಿ ಅವು ಇರಲೇಬೇಕು. ದೇವಾಲಯಗಳಲ್ಲಿ, ಗರಡಿಯ ಮನೆಗಳಲ್ಲಿ ವಾದ್ಯಗಳು ಬೇಕು. ಭಜನೆ ಮೇಳಗಳಲ್ಲಿ, ತತ್ವಮೇಳಗಳಲ್ಲಿ, ಸುಗ್ಗಿಯ ಕುಣಿತಗಳಲ್ಲಿ, ದೇವರ ಹಬ್ಬಗಳಲ್ಲಿ, ಮದುವೆಗಳಲ್ಲಿ ಅವು ಬೇಕು; ಸಾಮಾನ್ಯ ಗಾಯಕರು ಹಾಡುವ ಸಂದರ್ಭಗಳನ್ನು ಬಿಟ್ಟರೆ ಉಳಿದ ಕಲಾವಿದರು ತಮ್ಮ ತಮ್ಮ ಸಂಪ್ರದಾಯಗಳಿಗೆ ಮೀಸಲಾದ ವಾದ್ಯಗಳನ್ನು ರೂಢಿಸಿಕೊಂಡಿದ್ದಾರೆ. ವಾದ್ಯಮೇಳಗಳಿಗೇ ಮೀಸಲಾದ ಬುಡಕಟ್ಟಿನವರೂ ಕಂಡುಬರುತ್ತಾರೆ. ಚರ್ಮ ವಾದ್ಯಗಳನ್ನು ನುಡಿಸುವುದರಲ್ಲಿ ಹರಿಜನರು ನಿಪುಣರಾದರೆ, ಊದುವಾದ್ಯಗಳನ್ನು ನುಡಿಸುವುದರಲ್ಲಿ ನಯನ ಕ್ಷತ್ರಿಯರು ಹೆಸರಾಗಿದ್ದಾರೆ. ತಂತೀ ವಾದ್ಯಗಳನ್ನು ನುಡಿಸುವವರಲ್ಲಿ ವೃತ್ತಿಗಾಯಕರು ಹೆಚ್ಚಾಗಿ ಕಂಡು ಬಂದಿದ್ದಾರೆ. ಈ ವಾದ್ಯಗಳ ಅಪಾರ ವೈವಿಧ್ಯವನ್ನು ಗಮನದಲ್ಲಿಟ್ಟುಕೊಂಡು ಇವುಗಳನ್ನು ಸ್ಥೂಲವಾಗಿ ನಾಲ್ಕು ಪ್ರಮುಖ ವರ್ಗಗಳಲ್ಲಿ ವಿಂಗಡಿಸಿಕೊಳ್ಳಬಹುದು—

೧. ತಾಳವಾದ್ಯಗಳು ೨. ತಂತೀವಾದ್ಯಗಳು
೩. ಊದುವ ವಾದ್ಯಗಳು ೪. ಚರ್ಮವಾದ್ಯಗಳು

ತಾಳವಾದ್ಯಗಳು

ಕರ್ನಾಟಕದ ತಾಳವಾದ್ಯಗಳಲ್ಲಿ 'ತಾಳ' ಅತ್ಯಂತ ಜನಪ್ರಿಯವಾದುದು. ಶಿಷ್ಟಸಂಪ್ರದಾಯದಲ್ಲಿಯೂ ಇದು ಒಂದು ಮುಖ್ಯ ವಾದ್ಯವಾಗಿಯೇ ಬಳಕೆಯಾಗಿದೆ. ಜನಪದ ಸಂಪ್ರದಾಯಗಳಲ್ಲಿ ಇದು ವ್ಯಾಪಕವಾಗಿ ಕಂಡುಬರುತ್ತದೆ. ಯಕ್ಷಗಾನ ಬಯಲಾಟ, ಕರಪಾಲ ಮೇಳ, ಭಜನೆ ಮೇಳ, ಗೊಂಬೆಯಾಟ ಮುಂತಾದ ಪ್ರಮುಖ ಕಲೆಗಳಲ್ಲಿ ತಾಳ ಒಂದು ಮೂಲ ವಾದ್ಯವಾಗಿ ತೋರಿಬರುತ್ತದೆ. ಸಂಗೀತ ಪ್ರಧಾನವಾದ ಈ ಮೇಳಗಳಲ್ಲಿ ಮುಖ್ಯ ಗಾಯಕ ಈ ತಾಳವನ್ನು ಹಿಡಿದಿರುತ್ತಾನೆ. ಹಿತ್ತಾಳೆಯ ಸಾಧನಗಳಾದ ಇವು ಗುಂಡಗೆ ಕಿರಿದಾಗಿ ಇರುತ್ತವೆ. ತುಂಬ ದೊಡ್ಡ ತಾಳಗಳು ಅಂಗೈ ಅಗಲ ಇರುವುದೂ ಕಂಡುಬರುತ್ತದೆ. ದೊಡ್ಡಾಟಗಳಲ್ಲಿ ಬಳಸುವ ತಾಳಗಳು ಸಾಕಷ್ಟು ದೊಡ್ಡ ಆಕಾರದಲ್ಲಿ ಕಂಡುಬರುತ್ತವೆ. ದಾರಗಳ ಸಹಾಯದಿಂದ ಈ ತಾಳಗಳನ್ನು ಹಿಡಿದು ಗಾಯಕ ಅದರ ಗತ್ತಿಗೆ ತಕ್ಕಂತೆ ಸ್ವರ ವಿನ್ಯಾಸವನ್ನು ಮೆರೆಯುತ್ತಾ ಸಾಗುತ್ತಾನೆ. "ತಾಳ-ಮದ್ದಳೆ" ಸಂಪ್ರದಾಯದಲ್ಲಿ ಈ ವಾದ್ಯದ ಹೆಸರೇ ಪ್ರಧಾನವಾಗಿ ಉಳಿದುಬಂದಿರುವುದನ್ನು ಕಾಣಬಹುದು.

ತಾಳ



ಚಿಟಗಿ

ಲೋಹದ ಸಾಧನಗಳಾದ ಈ ತಾಳಗಳ ಜೊತೆಗೆ ಮರದ ತಾಳಗಳೂ ಕಂಡುಬರುತ್ತವೆ. "ಚಿಟಗಿ"ಗಳೆಂದು ಇವನ್ನು ಕರೆಯಲಾಗುತ್ತದೆ. ಆರು ಅಂಗುಲ ಉದ್ದದ ಈ ಚಿಟಗಿಗಳು ಎರಡು ಮರದ ಚಪ್ಪಟೆ ತುಂಡುಗಳು. ಹೆಬ್ಬೆರಳು ಮತ್ತು ತೋರುಬೆರಳುಗಳಿಗೆ ಹೊಂದಿಕೊಳ್ಳುವಂತೆ ಎರಡು ಕೊಂಡಿಗಳನ್ನು ಇಲ್ಲಿ ಅಳವಡಿಸಿರುತ್ತಾರೆ. ಚಿಟಗಿಯ ಒಂದೊಂದು ಭಾಗಕ್ಕೂ ಎರಡೆರಡು ಲೋಹದ ವಸ್ತುಗಳನ್ನು ಜೋಡಿಸಿ ಎರಡು ತಾಳಗಳೂ ಕೂಡಿದಾಗ ಅವು ನಾದಮಾಡುವಂತೆ ಮಾಡಲಾಗುತ್ತದೆ.

ತಾಳವಾದ್ಯಗಳ ಸಾಲಿನಲ್ಲಿ ಕಂಸಾಳೆ ವಿಶಿಷ್ಟವಾದುದು. ಮಲೆಯ ಮಾದೇಶ್ವರನ ಸಂಪ್ರದಾಯದಲ್ಲಿ ಮಾತ್ರ ಈ ವಾದ್ಯ ಕಂಡುಬರುತ್ತದೆ. ಕಂಚು ಅಥವಾ ಹಿತ್ತಾಳೆಯಿಂದ ಈ ತಾಳವನ್ನು ಮಾಡಲಾಗುತ್ತದೆ. ಮೈಸೂರು, ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಮಲೆಯ ಮಾದೇಶ್ವರ ಸಂಪ್ರದಾಯ ಪ್ರಚಲಿತವಾಗಿರುವ ಕಡೆಗಳಲ್ಲಿ ಮಾತ್ರ ಈ ವಾದ್ಯದ ಬಳಕೆ ಕಾಣಬರುತ್ತದೆ. ಸುಮಾರು ಎಂಟುನೂರು ವರ್ಷಗಳ ಹಿಂದೆ ಇದ್ದರೆನ್ನಲಾದ ಮಲೆಯ ಮಾದೇಶ್ವರರು ಈ ವಾದ್ಯವನ್ನು ನುಡಿಸಿಕೊಂಡು ಭಕ್ತರ ಮನೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು, ಎಂದು ಹೇಳಲಾಗುತ್ತದೆ. ಆ ವಾದ್ಯವೇ ಈ ಪರಂಪರೆಗೆ ಸೇರಿದ ದೇವರಗುಡ್ಡರು ಎಂಬ ಕಲಾವಿದರಲ್ಲಿ ಇಂದಿಗೂ ಉಳಿದು ಬಂದಿದೆ. ಇದನ್ನು ನುಡಿಸುತ್ತ ಕಂಸಾಳೆಯವರು ಸುಶ್ರಾವ್ಯವಾಗಿ ಹಾಡುತ್ತಾ ಬರುತ್ತಾರೆ. ಇದರ ಕಣಿಕಣಿನಾದ ಬಹುದೂರದವರೆಗೆ ಕೇಳಿಬರುತ್ತದೆ. ಹಿಂದೆ ಮಾದೇಶ್ವರ ಹಾಗೆ ಕಾಲುನಡಿಗೆಯಲ್ಲಿ ಯಾತ್ರೆ ಮಾಡಬೇಕಾದ ಸ್ಥಿತಿ ಇತ್ತು. ದಟ್ಟವಾದ ಕಾಡುಗಳ ನಡುವೆ ಯಾತ್ರಾರ್ಥಿಗಳು ಹೋಗುವಾಗ



ಕಂಸಾಳೆ

ಈ ವಾದ್ಯದ ನಾದ ಕಾಡಿನಲ್ಲೆಲ್ಲ ಹರಡಿ ಕಾಡುಪ್ರಾಣಿಗಳನ್ನು ಚದುರಿಸಲು ಸಾಧ್ಯವಾಗುತ್ತಿತ್ತು. ತಂಗುದಾಣಗಳಲ್ಲಿ ಈ ವಾದ್ಯವನ್ನು ಹಿಡಿದು ಭಕ್ತರು ಕಥೆಗಳನ್ನು ಮಾಡುತ್ತಿದ್ದರು. ಬೀಸು ಕಂಸಾಳೆ ಒಂಬ ನೃತ್ಯವನ್ನು ಮಾಡುತ್ತಿದ್ದರು.

ಕಂಸಾಳೆ ಎರಕದಿಂದ ಮಾಡಿದ ಹಿತ್ತಾಳೆಯ ಅಥವಾ ಕಂಚಿನ ಸಾಧನ. ಎರಡು ತಾಳಗಳು ಇಲ್ಲಿ ಕಂಡುಬರುತ್ತವೆ. ಒಂದು ಅಂಗೈ ಅಗಲದ ಬಟ್ಟಲು ; ಮತ್ತೊಂದು ಅಗಲವಾದ

ಆದರ ಮುಚ್ಚಳವೋ ಎಂಬಂಥ ಒಂದು ತಾಳ. ಇದನ್ನು ಗರಿ ಎನ್ನುತ್ತಾರೆ. 'ಗರಿಯ' ಬೆನ್ನಿನಲ್ಲಿ ಒಂದು ಸಣ್ಣ ರಂಧ್ರ ಮಾಡಿ ಬಣ್ಣಬಣ್ಣದ ಹುರಿಗಳಿಂದ ಕೂಡಿದ ಹಿಡಿಯನ್ನು ಮಾಡಿ ಕೊಳ್ಳುತ್ತಾರೆ. ಇದಕ್ಕೆ ಗಗ್ಗರಗಳನ್ನು ಅಳವಡಿಸುವುದೂ ಉಂಟು. ಕೊನೆಯಲ್ಲಿ ಗೊಂಡೇವುಗಳನ್ನು ಕಟ್ಟಿರುತ್ತಾರೆ. ಕಂಸಾಳೆ ನಮ್ಮ ಜನಪದ ವಾದ್ಯಗಳಲ್ಲಿ ಒಂದು ಪ್ರಮುಖ ಉಲ್ಲೇಖಕ್ಕೆ ಅರ್ಹವಾದುದು.

ಹೆಳವರು ಎಂಬ ವೃತ್ತಿಗಾಯಕರ ವಾದ್ಯ ಗಂಟೆ. ಇದನ್ನು ಆನೆಗಂಟೆ ಎಂದೂ ಕರೆಯುತ್ತಾರೆ. ಗುಡಿಯ ಗಂಟೆಗಿಂತ ಚಿಕ್ಕದಾದ ಸಾಧಾರಣ ಗಂಟೆಗೂ ತುಸು ದೊಡ್ಡದಾದ ಈ ಗಂಟೆಯನ್ನು ತಾಳವನ್ನಾಗಿ ಮಾಡಿಕೊಂಡು ಹೆಳವರು ಅನೇಕ ಹಾಡುಗಳನ್ನೂ, ಕಾವ್ಯಗಳನ್ನೂ ಹಾಡುತ್ತಾರೆ. ಗಂಟೆ ಹೆಳವರು ನಮ್ಮ ಜನಪದ ವೃತ್ತಿಗಾಯಕರಲ್ಲಿ ಲೌಕಿಕ ವರ್ಗಕ್ಕೆ ಸೇರಿದ ವರು. ತಮ್ಮ ಸಂಪ್ರದಾಯದ ಗಂಟೆಯನ್ನು ಕೈಯಲ್ಲಿ ಹಿಡಿದು,



ಹೆಳವರ ಗಂಟೆ

ಹೆಗಲಲ್ಲಿ ಜೋಳಿಗೆಯನ್ನು ಹಾಕಿ ಅವರು "ಕುಳ"ಗಳ ಮೇಲೆ ವಂಶಾವಳಿಗಳನ್ನು ಹೇಳಿಕೊಂಡು ಬರುತ್ತಾರೆ. ಈ ಹಿತ್ತಾಳೆ ಅಥವಾ ಕಂಚಿನ ಗಂಟೆಯ ಭಾಗವನ್ನು ಕೈಯಲ್ಲಿ ಮುಟ್ಟುವು

ದಿಲ್ಲ. ಆದರ ಹಿಂದಿನ ಕೊಂಡಿಗೆ ಅಳವಡಿಸಿದ ಬಟ್ಟೆಯ ಸಾಧನ ವನ್ನು ಮಾತ್ರ ಎಡಗೈಯಲ್ಲಿ ಹಿಡಿಯುತ್ತಾರೆ. ಬಲಗೈಯಲ್ಲಿ ಗಂಟೆಯ ನಾಲಗೆಯನ್ನು ಅದರ ಒಂದು ಕಂಟಕ್ಕೆ ಬಡಿಯುತ್ತಾ ಹಾಡುತ್ತಾರೆ. ನಾಲಗೆ ಮತ್ತು ಗಂಟೆಯ ಸ್ಪರ್ಶ ತಾಳದ ಕೆಲಸ ವನ್ನೇ ಮಾಡುತ್ತವೆ. ಈ ಗಂಟೆಗಳು ಹೆಳವರಿಗೆ ವಂಶಪಾರಂ ಪರ್ಯವಾಗಿ ಬಂದಿರುತ್ತವೆ. ಕೆಲವರು ತಮ್ಮ ಹೆಸರನ್ನು ಅದರ ಮೇಲೆ ಕೆತ್ತಿಸಿ ಉಡುಗೊರೆಯಾಗಿ ಹೆಳವರಿಗೆ ಅದನ್ನು ನೀಡಿರು ತ್ತಾರೆ. ಸಾಮಾನ್ಯವಾಗಿ ಹಾಡಲು ಬರುವವರು ಇಬ್ಬರು ಹೆಳ ವರು. ಇಬ್ಬರ ಕೈಯಲ್ಲೂ ಒಂದೊಂದು ಗಂಟೆ ಇರುತ್ತದೆ. ಜೋಡಿ ಗಂಟೆಗಳನ್ನು ನುಡಿಸುತ್ತ, ಹೊಗಳುವ ಪದಗಳನ್ನು ಹೇಳುತ್ತ ಹೆಳವರು ಮೇಳವನ್ನು ನಡೆಸುತ್ತಾರೆ.

ಡೊಳ್ಳು ಕುಣಿತ, ಚಿಟ್‌ಮೇಳ, ಹಲಗೆಮೇಳ, ಕರಡೆ ಮಜಲು ಮೊದಲಾದ ವಾದ್ಯ ಮೇಳಗಳಲ್ಲಿ ಇತರ ವಾದ್ಯಗಳ ಜೊತೆಗೆ ಜಲ್ಲರಿಗಳೆಂಬ ದೊಡ್ಡ ತಾಳಗಳನ್ನೂ ಬಳಸುತ್ತಾರೆ. ಇವು ತೆಳ್ಳನೆಯ ಲೋಹದ ಸಾಧನಗಳಾಗಿದ್ದು ಝುಣ್ ಝುಣ್ ನಾದದೊಡನೆ ಮೇಳಕ್ಕೆ ಮೆರಗು ಕೊಡುತ್ತವೆ. ಇವು ಹಿತ್ತಾಳೆಯ ತಾಳಗಳು. ವಿವಿಧ ಗತ್ತಿನಲ್ಲಿ ಕುಣಿಯುವಾಗ ಓಲಗ ಹಾಗೂ ಇತರ ವಾದ್ಯಗಳ ನಾದದ ಅಲೆಗಳ ನಡುವೆ ಇದರ ಝುಣತ್ಕಾರ ತುಂಬ ಆಪ್ಯಾಯಮಾನವಾಗಿರುತ್ತದೆ.

ದಾಸ ಸಂಪ್ರದಾಯದಲ್ಲಿ ಬಳಸುವ ಜಾಗಟೆಗಳೂ ಒಂದು ವಿಧವಾದ ವಾದ್ಯಗಳೇ. ಇದರಲ್ಲಿ ಸಾದಾ ಜಾಗಟೆ, ಜಗನ್ನಾಥ ಜಾಗಟೆ ಎಂಬ ಎರಡು ವಿಧಗಳುಂಟು. ಜಗನ್ನಾಥ ಜಾಗಟೆ ದೇವರ ಪೂಜೆಯ ಸಂದರ್ಭದಲ್ಲಿ ಬಾರಿಸುವ ಸಾಧನವಾದರೆ, ಸಾದಾ ಜಾಗಟೆ ವೆಂಕಟರಮಣನ ಭಕ್ತರಾದ ದಾಸಯ್ಯಗಳು ಬಳಸುವ ಸಾಧನವಾಗಿದೆ. ದೇವರ ಹೆಸರಿನಲ್ಲಿ ಭಿಕ್ಷೆ ಮಾಡುವ

ಝಲ್ಲರಿ


ಜಗನ್ನಾಥ ಜಾಗಟೆ


ಸಾಮಾನ್ಯ ಜಾಗಟೆ

ದಾಸಯ್ಯಗಳು ತಮ್ಮ ಹೆಗಲಿಗೆ ಜಾಗಟೆಯನ್ನೂ, ಶಂಖವನ್ನೂ ನೇತು ಹಾಕಿಕೊಂಡು ಬರುತ್ತಾರೆ. ಭಕ್ತರ ಮನೆಯ ಮುಂದೆ ನಿಂತು ಅವರು ತಾವು ಬಂದ ಸೂಚನೆಯನ್ನು ನೀಡುವಂತೆ ಮರದ ಕೋಲಿನಿಂದ ಜಾಗಟೆಯನ್ನು ಬಡಿಯುತ್ತಾರೆ. 'ಢಣ್ ಢಣ್' ಎಂದು ನಾದಮಾಡಿ ಭಕ್ತರನ್ನು ಹೊರಗೆ ಸೆಳೆಯುತ್ತದೆ.

ತಾಳವಾದ್ಯಗಳೆಲ್ಲ ಬಹುಮಟ್ಟಿಗೆ ಲೋಹದಿಂದ ಮಾಡಿದುವು. ಕಂಚು ಅಥವಾ ಹಿತ್ತಾಳೆಯನ್ನು ಈ ತಾಳಗಳಿಗೆ ಬಳಸುತ್ತಾರೆ. ಕೆಲವು ಜನಪದ ಮೇಳಗಳಲ್ಲಿ ಬಳಕೆಯಾದರೆ, ಉಳಿದುವು ಧಾರ್ಮಿಕ ವಿಧಿಗಳಲ್ಲಿ ಬಳಕೆಗೊಳ್ಳುತ್ತವೆ. ಸಾಮಾನ್ಯ ತಾಳದ ಜೊತೆಗೆ ವೈವಿಧ್ಯಮಯವಾದ ಇತರ ತಾಳಗಳೂ ಸಂಗೀತದ ಅನಿವಾರ್ಯವಾದ ಅಂಗವಾಗಿ ಬರುತ್ತವೆ. "ತಾಳ ಮೇಳ" ಕೂಡಿದರೆ ಆಟ ಎಂಬ ಗಾದೆ ಬಯಲು ಮೇಳಗಳಲ್ಲಿ ತಾಳಗಳ ಪಾತ್ರವನ್ನು ಸೂಚಿಸುತ್ತದೆ.

೩

ತಂತೀವಾದ್ಯಗಳು

ಜನಪದ ವಾದ್ಯಗಳಲ್ಲಿ ತಂತೀವಾದ್ಯಗಳೂ ಸಾಕಷ್ಟು

ಸಂಖ್ಯೆಯಲ್ಲಿ ಲಭ್ಯವಾಗುತ್ತವೆ. ಪ್ರೌಢ ಸಂಗೀತ ಸಂಪ್ರದಾಯದಲ್ಲಿ ಕಂಡುಬರುವ ವೀಣೆ, ತಂಬೂರಿ, ಸಿತಾರ್, ಸರೋದ್, ಪಿಟೀಲು ಮುಂತಾದುವು ಜನಪದ ತಂತೀವಾದ್ಯಗಳಿಂದಲೇ ರೂಪಿತವಾಗಿ ಬೆಳೆದುಬಂದುವು. ಜನಪದ ತಂತೀವಾದ್ಯಗಳಲ್ಲಿ ಮುಖ್ಯವಾದುವು: ೧. ಏಕತಾರಿ, ೨. ಕಿನ್ನರಿ, ೩. ತಂಬೂರಿ, ೪. ಚೌಡಿಕೆ.

"ಏಕತಾರಿ" ಒಂದು ಸೋರೆಬುರುಡೆಯಿಂದ ಮಾಡಿಕೊಂಡ ಸರಳ ವಾದ್ಯ. ಹಸಿಯ ಸೋರೆಬುರುಡೆಯನ್ನು ಚೆನ್ನಾಗಿ



ಏಕತಾರಿ

ಒಣಗಿಸಿ ಅದರ ಒಳಗಿನ ತಿರುಳನ್ನು ತೆಗೆದು ದುಂಡಗೆ ಮಾಡಿಕೊಳ್ಳುವರು. ಅದರ ಮೂಲಕ ಮೂರು ಅಡಿ ಉದ್ದದ ಒಂದು ಬಿದಿರ ಗಳುವನ್ನು ಅಳವಡಿಸಿರುತ್ತಾರೆ. ಒಂದು ತಂತಿಯನ್ನು ಗಳುವಿನ ಈ ತುದಿಯಿಂದ ಆ ತುದಿಯವರೆಗೆ ಎಳೆದು ಕಟ್ಟಲಾಗುವುದು. ಅದು ಸೋರೆ ಬ ರು ಡೆ ಯ ಮೇಲೆ ಹಾದು ಹೋಗುತ್ತದೆ. ಒಂದು ಬೆರಳಿನಲ್ಲಿ ಮಿಾಟಿದಾಗ "ಟಣ್‌ಟಣ್" ಎಂದು ನಾದವನ್ನು ಕೊಡುತ್ತದೆ. ಒಂದೇ ತಂತಿಯ ನಾದ ಇದರಿಂದ ಬರುವುದರಿಂದ ಇದನ್ನು "ಏಕನಾದ" ಎಂದೂ ಕರೆಯುತ್ತಾರೆ.

"ಏಕತಾರಿ"ಯನ್ನು ದೊಂಬಿದಾಸರು, ತೆಲುಗು ಜಂಗಮರು, ತತ್ವಪದದವರು ಮುಂತಾದ ಗಾಯಕರು ಹಾಡುಗಾರಿಕೆಯಲ್ಲಿ ಬಳಸುತ್ತಾರೆ. ಭಜನೆಗಳಲ್ಲಿಯೂ ಇದನ್ನು ಬಳಸುವುದುಂಟು.

"ಕಿಂದರಿ ಜೋಗಿ" ಎಂಬ ಹೆಸರನ್ನು ನೀವು ಕೇಳಿಲ್ಲವೇ ? "ಬೊಮ್ಮನ ಹಳ್ಳಿಯ ಕಿಂದರಿ ಜೋಗಿ" ಕುವೆಂಪು ಅವರು ಮಕ್ಕಳಿಗಾಗಿ ಬರೆದಿರುವ ಅತ್ಯಂತ ಜನಪ್ರಿಯ ಹಾಡು. ಜೋಗಿಯು ಬಳಸಿದ ಒಂದು ವಾದ್ಯದಿಂದ ಅವನನ್ನು 'ಕಿಂದರಿ ಜೋಗಿ' ಎಂದು ಕರೆಯಲಾಗಿದೆ. ಇದು 'ಕಿನ್ನರಿ', 'ಕಿಂದರಿ', ಅಥವಾ 'ಕಿನ್ನುಡಿ' ಎಂಬ ಅಪೂರ್ವವಾದ ಜನಪದ ವಾದ್ಯ.



ಕಿನ್ನರಿ

ಕಿನ್ನರಿ ಜೋಗಿಗಳು ಕರ್ನಾಟಕದ ವೃತ್ತಿಗಾಯಕರಲ್ಲಿ ಒಂದು ಗುಂಪಿನವರು. ಈ ವಾದ್ಯವನ್ನು ಹಿಡಿದು ಅವರು "ಅರ್ಜುನ ಜೋಗಿ ಹಾಡ"ನ್ನು ಹಾಡಿಕೊಂಡು ಬರುತ್ತಾರೆ. ಮಹಾಭಾರತದ ಕಥೆಗಳನ್ನೂ ಹಾಡುತ್ತಾರೆ. ನಾನಾ ಬಣ್ಣದ ವೇಷ ಭೂಷಣಗಳನ್ನು ಧರಿಸಿಕೊಂಡು ಬರುತ್ತಾರೆ. ಜನ ಇವರ ಹಾಡನ್ನೂ, ಇವರ ವಾದ್ಯದ ನಾದವನ್ನೂ ಬಹುವಾಗಿ ಮೆಚ್ಚುತ್ತಾರೆ. ಕಿನ್ನರಿಯೂ ಸಹ ಸೋರೆಬುರುಡೆಯ ವಾದ್ಯವೇ. ಸೋರೆಬುರುಡೆಯನ್ನು ಮಾಗಿ ಬುರುಡೆ ಎಂದೂ ಕರೆಯುತ್ತಾರೆ.

ಚಿತ್ರದಲ್ಲಿ ಕಾಣುವಂತೆ ಮೂರು ಅಡಿ ಉದ್ದದ ಒಂದು ಗಳುವಿಗೆ ಮೂರು ಸೋರೆಬುರುಡೆಯನ್ನು ಅಳವಡಿಸುತ್ತಾರೆ. ಗಳುವಿನ ಇನ್ನೊಂದು ಬೆನ್ನಿನ ಮೇಲೆ ಹನ್ನೆರಡು "ಸಾರಿ"ಗಳಿರುತ್ತವೆ. ಸಾರಿಗಳು ಮುಳ್ಳುಹಂದಿಯ ಜಾತಿಗೆ ಸೇರಿದ ಒಂದು ಪ್ರಾಣಿಯ ಮೈಮೇಲಿನ ಚಿಪ್ಪುಗಳು. ಜೇನುಮೇಣದಿಂದ ಇದನ್ನು ಗಳುವಿಗೆ ಅಂಟಿಸುತ್ತಾರೆ. ಇವುಗಳ ಮೇಲೆ ನಾಲ್ಕು ತಂತಿಗಳು ಹಾದುಹೋಗಿರುತ್ತವೆ. ಗಳುವಿನ ಒಂದು ತುದಿಗೆ ಮೂಗ ಅಥವಾ ಸೂಲಂಗಿ ಮರದಲ್ಲಿ ಮಾಡಿದ ಗಿಣಿಯನ್ನು ಅಳವಡಿಸುತ್ತಾರೆ. ಮತ್ತೊಂದು ತುದಿಯಲ್ಲಿ ನವಿಲುಗರಿಗಳು. ಈ ಗಿಣಿಯಿಂದಾಗಿ ಇವರು ಹಾಡುವ ಪದಗಳನ್ನು "ಗಿಣಿ ಹಾಡು" ಎಂದೂ ಕರೆಯುತ್ತಾರೆ.

"ತಂಬೂರಿ" ವಾದ್ಯ ಶಾಸ್ತ್ರೀಯ ಸಂಗೀತದಲ್ಲೂ ಇದೆ. ಆದರೆ ಜನಪದ ಗಾಯಕರು ಬಳಸುವ ತಂಬೂರಿ ವಿಶಿಷ್ಟ ವಾದುದು. ಎರಡು ಮೊಳ ಉದ್ದದ ಇದನ್ನು ಹಲಸಿನ ಮರ

ತಂಬೂರಿ

ದಲ್ಲಿ ಕಡೆಯಲಾಗುವುದು. ಇದರ ಒಂದು ತುದಿಯಲ್ಲಿ ನಾಗರ ಹೆಡೆ ಅಥವಾ ಸಿಂಗದ ಮುಖವನ್ನು ಬಿಡಿಸುವರು. ನಾಲ್ಕು ತಂತಿಯ ಈ ವಾದ್ಯವನ್ನು "ಸರಸ್ವತಿ" ಎಂದೂ ಗಾಯಕರು ಕರೆಯುವರು. ಜನಪದ ಗಾಯಕರಲ್ಲಿ 'ನೀಲಗಾರರು' ಮತ್ತು

ತಂಬೂರಿಯವರು' ಎಂಬ ಗುಂಪಿನವರು ಈ ವಾದ್ಯವನ್ನು ಬಳಸುತ್ತಾರೆ. ಇದರ ಜೊತೆಗೆ ಪೋಷಕವಾದ್ಯಗಳು ಬೇರೆ ಇರುತ್ತವೆ.

"ಚೌಡಿಕೆ" ಎನ್ನುವುದು ತಂತೀವಾದ್ಯದ ಗುಂಪಿಗೇ ಸೇರ ಬಹುದಾದ ವಾದ್ಯವಾದರೂ, ಅದರಲ್ಲಿ ತಂತಿ ಇರುವುದಿಲ್ಲ. ತಂತಿಗೆ ಬದಲಾಗಿ ಕುರಿಯ ಕರುಳಿನ ದಾರವನ್ನು ಇಲ್ಲಿ ಬಳಸು

ಚೌಡಿಕೆ

ವರು. ಚೌಡಿಕೆಯಲ್ಲಿ ಎರಡು ಬಗೆಯ ವಾದ್ಯಗಳು ಕಂಡು ಬರುತ್ತವೆ. ೧. ಬಾರಿಕೆವಾದ್ಯ ೨. ಶ್ರುತಿ.

ಇದು ಒಂದು ಕೊಳಗದಾಕಾರದ ವಾದ್ಯ. ಒಂದು ಅಡಿ ಉದ್ದದ ಕುಂಬಳದ ಮರ ಅಥವಾ ತೆಂಗಿನ ಮರವನ್ನು ತಿರುಳು ತೆಗೆದು ಕೊಳವೆಯಂತೆ ಮಾಡಿಕೊಳ್ಳುವರು. ಒಂದು ಕಡೆಗೆ ಅದನ್ನು ಬಾತುಕೋಳಿಯ, ಮೇಕೆಯ ಚರ್ಮದಿಂದ ಮುಚ್ಚು ವರು. ಚರ್ಮದ ನಡುವೆ ಒಂದು ರಂಧ್ರದ ಮೂಲಕ ಕರುಳ

ಹುರಿಯನ್ನು ಆಳವಡಿಸಿ ಬಿಗಿಗೊಳಿಸುವರು. ಒಂದು ಕಡ್ಡಿಯ ಸಹಾಯದಿಂದ ನುಡಿಸಿದರೆ ಅದು "ಟಂಗ್ ಟಂಗ್" ಎಂಬ ಸುಂದರವಾದ ಶಬ್ದವನ್ನು ನೀಡುವುದು. ಇದನ್ನು ನುಡಿಸಿಕೊಂಡು ಗೊಂದಲಿಗರು ಮತ್ತು ಚೌಡಿಕೆಯವರು ಎಂಬ ಗಾಯಕರು ಕಥೆಗಳನ್ನು ಹಾಡುವರು ; ಕುಣಿಯುವರು.

ಇದು ಶಕ್ತಿದೇವತೆಯ ಸಂಪ್ರದಾಯದ ವಾದ್ಯವಾದುದರಿಂದ "ಚೌಡಿಕೆ" ಎಂಬ ಹೆಸರು ಬಂದಿದೆ. ಮುಖ್ಯವಾಗಿ ಎಲ್ಲಮ್ಮನ ಸಂಪ್ರದಾಯದ ವಾದ್ಯ ಇದು. ನಮ್ಮ ಪುರಾಣಕಥೆಗಳಲ್ಲಿ ಕಂಡುಬರುವ "ರೇಣುಕೆ"ಯೇ ಎಲ್ಲಮ್ಮನ ಅವತಾರ ಎತ್ತಿದ್ದಳು ಎಂದು ಹೇಳುತ್ತಾರೆ. ರೇಣುಕೆಯು ಪರಶುರಾಮನ ತಾಯಿ. ತನ್ನ ತಾಯಿಯ ಕಷ್ಟಕ್ಕೆ ಕಾರಣನಾದ ಕಾರ್ತವೀರ್ಯಾರ್ಜುನನನ್ನು ಪರಶುರಾಮ ಕೊಂದು, ಅವನ ಶರೀರದಲ್ಲಿ ಒಂದು ವಾದ್ಯವನ್ನು ತಯಾರಿಸಿದ. ಅದನ್ನು "ಚೌಡಿಕೆ" ಎಂದು ಕರೆದ. ಅದನ್ನು ಹಿಡಿದುಕೊಂಡು ನುಡಿಸುತ್ತ ತಾಯಿಯನ್ನು ಸ್ತುತಿಸಿದ. ಅವಳನ್ನು ಸಂತೋಷಗೊಳಿಸಿದ. ಪರಶುರಾಮನ ಪರಂಪರೆಗೆ ಸೇರಿದವರೇ ಈ ಚೌಡಿಕೆಯವರು.

೪

ಊದುವ ವಾದ್ಯಗಳು

ಗಾಳಿ ಬೀಸುವಾಗ ಮರದ ಎಲೆಗಳು ಪರಸ್ಪರ ತಾಗಿ ಸಿಳ್ಳುಹಾಕುತ್ತವೆ. ಹಕ್ಕಿಗಳು ಹಾಡುತ್ತವೆ. ಮನುಷ್ಯರೂ ಸಂಗೀತವನ್ನು ಹಾಡುತ್ತಾರೆ. ಇಲ್ಲೆಲ್ಲಾ ಗಾಳಿಯೇ ಒಂದು ಬಗೆಯ ನಾದವನ್ನು ಸೃಷ್ಟಿಮಾಡಿ ಸಂಗೀತವನ್ನುಂಟುಮಾಡು

ತ್ತದೆ. ಊದುವ ವಾದ್ಯಗಳು ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ. ಮನುಷ್ಯನ ಉಸಿರು ಈ ವಾದ್ಯಗಳಲ್ಲಿ ನಾದವನ್ನು ಸೃಷ್ಟಿಸುತ್ತದೆ.

ಊದುವ ವಾದ್ಯಗಳೆಲ್ಲ ಕೊಳವೆಯ ಆಕಾರದಲ್ಲಿಯೇ ಇರುತ್ತವೆ. ಶಾಸ್ತ್ರೀಯ ಸಂಗೀತಕ್ಕಿಂತ ಜನಪದ ಸಂಗೀತದಲ್ಲಿ ಊದುವ ವಾದ್ಯಗಳು ಹೆಚ್ಚು. ಶಾಸ್ತ್ರೀಯ ಸಂಗೀತದಲ್ಲಿ ಬಳಸುವ ನಾಗಸ್ವರ, ಕೊಳಲು, ಷಹನಾಯಿ ಮೊದಲಾದವು ಮೂಲತಃ ಜನಪದ ವಾದ್ಯಗಳು. ಕೊಳಲು, ಪಿಳ್ಳಂಗೋವಿ, ಗಣೆ, ಮೌರಿ, ಮುಖ ವೀಣೆ, ಪುಂಗಿ, ಕೊಂಬು, ಕಹಳೆ, ಶ್ರುತಿ, ಭೋಂಕಿ, ಶಂಖ, ಸಿಂಗನಾದ, ಮೊದಲಾದ ಅನೇಕ ಬಗೆಯ ಊದುವ ವಾದ್ಯಗಳನ್ನು ಜನಪದ ಜೀವನದಲ್ಲಿ ನಾವು ಕಾಣಬಹುದು. ಇವುಗಳಲ್ಲಿ ಎರಡು ಬಗೆಗಳನ್ನು ನೋಡಬಹುದು. ಕೆಲವು ಸಂಗೀತ ಪ್ರಧಾನವಾದುವು. ಯಾವುದೇ ರಾಗವನ್ನು ನುಡಿಸಬಹುದಾದುವು. ಉದಾಹರಣೆಗೆ: ಕೊ ಳ ಲು, ಗಣೆ, ಪಿಳ್ಳಂಗೋವಿ, ಮುಖವೀಣೆ, ಪುಂಗಿ, ಓಲಗಗಳು ಸಂಗೀತಕ್ಕೆ ಬಳಸುವ ವಾದ್ಯಗಳು. ಕೊಂಬು, ಕಹಳೆ, ಶಂಖ, ಭೋಂಕಿ, ಸಿಂಗನಾದ ಮೊದುಲಾದವು ತಮ್ಮ ವಿಶಿಷ್ಟ ಶಬ್ದಗಳಿಗಾಗಿ ಹೆಸರಿಸಬೇಕಾದುವು. ಇವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಜನಪದ ಸಂಪ್ರದಾಯಗಳಲ್ಲಿ ಬಳಕೆಯಾಗುತ್ತವೆ.

ಕೊಳಲು, ಗಣೆ, ಪಿಳ್ಳಂಗೋವಿಗಳು ಒಂದೇ ಗುಂಪಿನ ವಾದ್ಯಗಳು. ಇವೆಲ್ಲ ಬಿದಿರ ಕೊಳವೆಗಳು. ದನ ಕುರಿಗಳನ್ನು ಕಾಯುವ ಗೊಲ್ಲರು ವಿಶೇಷವಾಗಿ ಇವುಗಳನ್ನು ಬಳಸುತ್ತಾರೆ. ಕಾಡುಮೇಡುಗಳಲ್ಲಿ ದನದ ಹಿಂಡುಗಳ ಹಿಂದೆ, ಕುರಿಮಂದೆ

ಕೊಳಲು

ಗಣೆ

ಗಳ ಜೊತೆಯಲ್ಲಿ ಅಲೆಯುವಾಗ ಬೇಸರವನ್ನು ನೀಗಲು ಈ ವಾದ್ಯವನ್ನು ಅವರು ಬಳಸುತ್ತಾರೆ. ಕೊಳಲು ಮತ್ತು ಪಿಳ್ಳಂಗೋವಿಗಳು ಚಿಕ್ಕ ಬಿದಿರಿನ ಕೊಳವೆಗಳು. ತುಟಿಗೆ ಅಡ್ಡಲಾಗಿ ಹಿಡಿದು ಊದಬಹುದಾದ ಈ ವಾದ್ಯಗಳಲ್ಲಿ ಗಣೆ ಬಹಳ ದೊಡ್ಡದು. ಪಿಳ್ಳಂಗೋವಿ ಬಾಯಲ್ಲಿ ಊದುವ ವಾದ್ಯ. ಗಣೆ ಸುಮಾರು ಮೂರು ಅಡಿ ಉದ್ದವಿರುತ್ತದೆ. ಇದರಲ್ಲಿ ಒಂದು ಭಾಗದಲ್ಲಿ ದೊಡ್ಡ ರಂಧ್ರವೂ, ಮತ್ತೊಂದು ಭಾಗದಲ್ಲಿ ನಾಲ್ಕು ಸಣ್ಣ ರಂಧ್ರಗಳೂ ಇರುತ್ತವೆ. ಮೂರು ಗಿಣ್ಣಿನ ಈ ಬಿದಿರ ಕೊಳವೆ ಕೊಡುವ ನಾದ ಮೋಹಕವಾದುದು. ಲೋಹದ ಬಳೆಗಳನ್ನು ಹಾಕಿದ ಈ ವಾದ್ಯವನ್ನು ಗೊಲ್ಲರು ಮಾತ್ರ ಬಳಸುತ್ತಾರೆ. ಇದನ್ನು ತಮ್ಮ ಗುಡಿಸಿಲುಗಳಲ್ಲಿ ದೇವರಂತೆ ಇಟ್ಟು ಪೂಜಿಸುತ್ತಾರೆ. ಗೊಲ್ಲರಲ್ಲಿ ಕೆಲವರು ಈ ಗಣೆಯನ್ನು ಊದಿ ದೇವರನ್ನು ಮೈದುಂಬಿಸಿಕೊಂಡು 'ಕಣಿ' ಹೇಳುತ್ತಾರೆ. ಕಣಿ ಹೇಳುವುದೆಂದರೆ ಭವಿಷ್ಯವನ್ನು ಹೇಳುವುದು. ಕೆಲವು ಗಾಯಕರು ಈ ವಾದ್ಯವನ್ನು ಶ್ರುತಿಮಾಡಿಕೊಂಡು ಕಥೆಗಳನ್ನು ಹಾಡುತ್ತಾರೆ.

ಮೌರಿ ಅಥವಾ ಓಲಗ ನಮ್ಮ ಊದುವ ವಾದ್ಯಗಳಲ್ಲಿ ಪ್ರಸಿದ್ಧವಾದುದು. ಇದು ಒಂದೂವರೆ ಅಡಿಯಿಂದ ಎರಡು ಅಡಿಗಳವರೆಗೆ ಉದ್ದವಾಗಿದ್ದು ಒಂದುಕಡೆ ಚೂಪಾಗಿಯೂ ಇನ್ನೊಂದು ಕಡೆ ನಳಿಕೆಯಂತೆ ಅಗಲವಾಗಿಯೂ ಇರುತ್ತದೆ.



ಓಲಗ

ಇದು ಮರದಲ್ಲಿ ಮಾಡಿದ ಕೊಳವೆ. ಈ ಮೌರಿಯಲ್ಲಿ ಹದಿನಾಲ್ಕರವರೆಗೆ ರಂಧ್ರಗಳಿರಬಹುದು. ನಳಿಕೆಯಂಥ ಅಗಲವಾದ ಭಾಗವನ್ನು "ಅಣಸು" ಎನ್ನುತ್ತಾರೆ. ನಳಿಕೆ ಕೊಳವೆ ಇನ್ನೊಂದು ತುದಿಯಲ್ಲಿರುತ್ತದೆ. ವಾಟಿಕಡ್ಡಿಗೆ ಬಿಚ್ಚೋಲೆಯ ಚೂರುಗಳನ್ನು ಅಳವಡಿಸುತ್ತಾರೆ. ಇದು ಊದುವ ಭಾಗ. ರಂಧ್ರಗಳ ಮೂಲಕ ಊದುವಾಗ ನಾಳವನ್ನು ನಿಯಂತ್ರಿಸಿ ನಾನಾ ರಾಗಗಳನ್ನು ಹೊರಡಿಸುತ್ತಾರೆ.

ಓಲಗ ಮಂಗಳ ವಾದ್ಯ, ತಾಳ, ಮದ್ದಲೆಗಳ ಜೊತೆಯಲ್ಲಿ ಇದನ್ನು ಮದುವೆ, ದೇವರ ಉತ್ಸವ ಹಾಗೂ ಇತರ ಮಂಗಳ ಕಾರ್ಯಗಳಲ್ಲಿ ಬಳಸುತ್ತಾರೆ. ಹರಿಜನರ ಮೇಳ, ಕ್ಷೌರಿಕರ ಮೇಳ ಮೊದಲಾದ ವಿಶೇಷ ಓಲಗದ ಮೇಳಗಳನ್ನು ಕಾಣಬಹುದು. ಇದರ ಆಧಾರದ ಮೇಲೆಯೇ 'ಕರಡೇ ಮಜಲು' ಮತ್ತು 'ಚಿಟ್‌ಮೇಳ'ಗಳೆಂಬ ಕರ್ನಾಟಕದ ವಾದ್ಯ ಮೇಳಗಳು ಹುಟ್ಟಿಕೊಂಡಿವೆ. ಕೋಲೆಬಸವನವರು ಬಳಸುವ ಓಲಗವೂ ಈ ಗುಂಪಿಗೇ ಸೇರುತ್ತದೆ.

ಮುಖವೀಣೆ ಮೂಡಲಪಾಯ ಯಕ್ಷಗಾನಗಳಲ್ಲಿ ಬಳಸುವ ವಾದ್ಯ. ಮದ್ದಲೆಯ ಜೊತೆಗೆ ಒಬ್ಬ ಮುಖವೀಣೆಯ ತಜ್ಞ ಈ ವಾದ್ಯವನ್ನು ಊದುತ್ತಾನೆ. ಮುಖವೀಣೆಯೆಂದರೆ ಒಂದು ಊದುವ ವಾದ್ಯ. ಒಂದು ಚಿಕ್ಕ ಓಲಗ ಎನ್ನಬಹುದು. ವಿವಿಧ ರಾಗಗಳಿಗೆ ಇದನ್ನು ಊದಿ ಹಿಮ್ಮೇಳನ ಒದಗಿಸುವರು.



ಮುಖವೀಣೆ

ಒಂದು ಅಡಿ ಉದ್ದದ ಈ ವಾದ್ಯದಲ್ಲಿ ಒಂದು ಕಡೆ ಎಂಟು ರಂಧ್ರಗಳಿರುತ್ತವೆ. ಇನ್ನೊಂದು ಕಡೆ ಎರಡು ರಂಧ್ರಗಳಿರುತ್ತವೆ. ಕಾಡುಮರದಲ್ಲಿ ಇದನ್ನು ಮಾಡಿಕೊಳ್ಳಲಾಗುತ್ತದೆ. ತಾಮ್ರದ ಲಳಿ, ದಂತದ ಮುಳ್ಳು ಇಲ್ಲಿ ಗಮನಾರ್ಹ. ಉತ್ತರ ಕರ್ನಾಟಕದಲ್ಲಿ ಸ್ವಲ್ಪ ದೊಡ್ಡ ವಾದ್ಯವನ್ನು ಬಳಸುತ್ತಾರೆ. ಅದನ್ನು "ಸೊನಾಯಿ" ಎನ್ನುತ್ತಾರೆ. ಬಿಸ್‌ಮಿಲ್ಲಾಖಾನರ "ಶಹನಾಯಿ" ಈ ಮೂಲದ ವಾದ್ಯವೇ.

ಹಾವಾಡಿಗರು ಬಳಸುವ ಪುಂಗಿ ಸೋರೆಬುರುಡೆಯ ವಾದ್ಯ. ಜಿಯಾಳದ ಕಡ್ಡಿಯನ್ನು ಅಳವಡಿಸಿ ಊದುವ ವಾದ್ಯ ಮಾಡಿಕೊಳ್ಳುತ್ತಾರೆ. ಇಂಥದೇ ವಾದ್ಯವನ್ನು ಹಿಂದೆ ಬಯಲಾಟಗಳಲ್ಲಿ ಶ್ರುತಿಗಾಗಿ ಬಳಸುತ್ತಿದ್ದರು.

ಪುಂಗಿ

ಪುಂಗಿಯನ್ನೂ ಮುಖವೀಣೆಯನ್ನೂ ಏಕಕಾಲದಲ್ಲಿ ಊದುವ ಸಂಪ್ರದಾಯದವರೂ ಉಂಟು. ಶ್ರುತಿ ಮತ್ತು ನುಡಿಸುವ ವಾದ್ಯಗಳನ್ನು ಒಬ್ಬನೇ ವ್ಯಕ್ತಿ ನಿರ್ವಹಿಸುವುದು ಆಶ್ಚರ್ಯದ ವಿಷಯ.

ಯುದ್ಧಕಾಲದಲ್ಲಿ, ಮಂಗಳ ಸಂದರ್ಭಗಳಲ್ಲಿ, ಉತ್ಸವ ಮೆರವಣಿಗೆಗಳಲ್ಲಿ ದೂರದ ಜನರನ್ನು ಆಕರ್ಷಿಸಲು, ಊದುವ ಲೋಹದ ವಾದ್ಯ ಕಹಳೆ. ಇದನ್ನು ಕಂಚು ಅಥವಾ ಹಿತ್ತಾಳೆಯಲ್ಲಿ ಮಾಡಿರುತ್ತಾರೆ. ಬಹಳ ದೂರದವರೆಗೆ ಇದರ ನಾದಕೇಳಿಸುತ್ತದೆ. ಜೊತೆಗೆ ಹೇಡಿಗಳನ್ನು ಇದು ಬಡಿದೆ

ಬ್ಬಿಸಿ ಹುರಿದುಂಬಿಸಬಲ್ಲದು. ಇದು ಎರಡುವರೆ ಅಡಿ ಉದ್ದದ ವಾದ್ಯ. ಒಂದು ಕಡೆ ಚೂಪಾಗಿ, ಮತ್ತೊಂದು ಕಡೆ ಅಗಲವಾಗಿ ತೆರೆದುಕೊಂಡಿರುತ್ತದೆ.ಇದು ಎರಡು ಭಾಗಗಳಾಗಿದ್ದು ಊದುವ ಸಂದರ್ಭದಲ್ಲಿ ಅವನ್ನು ಕೂಡಿಸಿಕೊಳ್ಳುತ್ತಾರೆ. "ಕೊಂಬು",

ಕಹಳೆ



ಕೊಂಬು



ರಣ ಕಹಳೆ

"ಕಹಳೆ" ಎರಡೂ ಒಂದೇ ಉದ್ದೇಶಕ್ಕಾಗಿ ಬಳಸುವ ವಾದ್ಯಗಳು. ಎರಡರ ವಿನ್ಯಾಸ ಬೇರೆ ಬೇರೆಯಾಗಿರುತ್ತದೆ. ವಂಕಿವಂಕಿಯಾಗಿ ಬಾಗಿದ್ದರೆ ಅದು ಕಹಳೆಯಾಗುತ್ತದೆ. ಕೊಂಬಿನಂತೆ ಬಾಗಿದ್ದರೆ ಅದು "ಕೊಂಬಾ"ಗುತ್ತದೆ. ನೇರವಾಗಿದ್ದರೆ ಅದು "ರಣಕಹಳೆ". ಹೀಗೆ ಕಹಳೆಗಳಲ್ಲಿ ಬೇರೆ ಬೇರೆ ಬಗೆಗಳುಂಟು.

ತಿರುಪತಿ ವೆಂಕಟರಮಣನ ಭಕ್ತರಾದ ದಾಸಯ್ಯಗಳು ಒಂದು ಬಗೆಯ ಕಹಳೆಯನ್ನು ಬಳಸುತ್ತಾರೆ. ಇದನ್ನು "ಭೋಂಕಿ" ಎನ್ನುತ್ತಾರೆ. ಹಿಂದೆ ತಿರುಪತಿ ಬೆಟ್ಟಕ್ಕೆ ಹೋಗುವಾಗ ಕಾಡುಮೇಡುಗಳಲ್ಲಿ ಹೋಗಬೇಕಾಗಿತ್ತು. ಭಕ್ತರು ಯಾತ್ರೆ ಹೊರಟರೆ ಇವರನ್ನು ಜೊತೆಯಲ್ಲಿ ಕರೆದೊಯ್ಯುತ್ತಿದ್ದರು. ದಾಸಯ್ಯಗಳು ತಮ್ಮ ಭೋಂಕಿ ಮತ್ತು ಶಂಖುಗಳನ್ನು ಊದುತ್ತಾ ಭಕ್ತರ ತಂಡವನ್ನು ಕರೆದೊಯ್ಯುತ್ತಿದ್ದರು. ಈಗಲೂ ಶನಿವಾರ ದೇವರ ಹೆಸರಿನಲ್ಲಿ ಭಿಕ್ಷೆಮಾಡುವ ದಾಸಯ್ಯಗಳು ಈ ವಾದ್ಯಗಳನ್ನು ತರುತ್ತಾರೆ.



ಭೋಂಕಿ

ಜನಪದ ವಾದ್ಯಗಳಲ್ಲಿ ಶಂಖುವೂ ಮುಖ್ಯವಾದುದು. ರಣವಾದ್ಯಗಳಲ್ಲಿ ಇದೂ ಒಂದು. ಕೃಷ್ಣನ ಪಾಂಚಜನ್ಯವಿದ್ದಂತೆ. ಹಿಂದೆ ಪ್ರತಿಯೊಬ್ಬ ವೀರನ ಬಳಿಯೂ ಇಂಥ ಒಂದೊಂದು ಶಂಖು ಇರುತ್ತಿತ್ತು. ಇದರಿಂದ ಶಂಖು ಎಷ್ಟು ಪ್ರಾಚೀನವಾದುದು ಎಂಬುದು ತಿಳಿಯುತ್ತದೆ. ಶಂಖು ಸಮುದ್ರದಲ್ಲಿ ದೊರೆಯುವ

ಶಂಖ

ಒಂದು ಬಗೆಯ ಸುರುಳಿಯಾದ ಚಿಪ್ಪು. ಇದರ ನೆತ್ತಿಗೆ ಲೋಹದ ಕೊಳವೆಯನ್ನು ಅಳವಡಿಸಿ ಊದಲಾಗುತ್ತದೆ.

ಚುಂಚನಗಿರಿ ಭೈರವನ ಭಕ್ತರಾದ "ಜೋಗಿ"ಗಳು ಸಿಂಗನಾದ ಎಂಬ ವಾದ್ಯವನ್ನು ಬಳಸುತ್ತಾರೆ. ಇದು ಜಿಂಕೆಯ ಕೋಡಿನ ಅಥವಾ ಬೆಳ್ಳಿಯ ತಗಡಿನ ಪುಟ್ಟವಾದ್ಯ. ಇದನ್ನು ಜೋಗಿಗಳು ತಮ್ಮ ಕೊರಳಿಗೆ ಹಾಕಿಕೊಂಡು ಭಾನುವಾರಗಳಲ್ಲಿ ದೇವರ ಹೆಸರಿನಲ್ಲಿ ಭಿಕ್ಷೆಮಾಡುತ್ತಾರೆ. ಭಿಕ್ಷೆಯನ್ನು ಸ್ವೀಕರಿಸುವ ಮುನ್ನ, ಅನಂತರ ಈ ಸಿಂಗನಾದವನ್ನು ಅವರು ಊದುತ್ತಾರೆ. ಬೆಳ್ಳಿಯ ಸಿಂಗನಾದ ಬೆರಳುದ್ದದ ಒಂದು ಪೀಪಿ. ಇದೊಂದು ಚೋಟುದ್ದ ವಾದ್ಯ.

ಬೆಳ್ಳಿಯ ಪೀಪಿ

ಜಿಂಕೆ ಕೋಡು

ಜನಪದ ಜೀವನದಲ್ಲಿ ಇನ್ನೂ ಅನೇಕ ಬಗೆಯ ಊದುವ ವಾದ್ಯಗಳು ಕಂಡುಬರುತ್ತವೆ. ಹಾಗೆಯೇ ಇವುಗಳನ್ನು ನಾನಾ ವಿನ್ಯಾಸದಲ್ಲಿ ಊದುವ ಕುಶಲಿಗಳೂ ಕಂಡುಬರುತ್ತಾರೆ. ಶ್ರುತಿ ಮತ್ತು ಮುಖ್ಯವಾದ್ಯ ಎರಡನ್ನು ಒಟ್ಟಿಗೇ ಒಬ್ಬರೇ ಊದುವ ವರೂ ಉಂಟು. ಒಂದು ಪಾತ್ರೆಯಲ್ಲಿ ನೀರು ತುಂಬಿಕೊಂಡು ಮೂಗಿನಿಂದ ವಾದ್ಯವನ್ನು ನುಡಿಸಿ ನೀರನ್ನು ಮೂಗಿನ ಒಂದು ಸೊಳೆಯಿಂದ ಮತ್ತೊಂದು ಸೊಳೆಯ ಮೂಲಕ ಹಾಯಿಸುವ ಕುಶಲಿಗಳೂ ಉಂಟು.

ಚರ್ಮವಾದ್ಯಗಳು

ಜನಪದ ವಾದ್ಯಗಳಲ್ಲಿ ಚರ್ಮವಾದ್ಯಗಳ ಸ್ಥಾನ ಮುಖ್ಯ ವಾದುದು. ಇವೆಲ್ಲ ಕೈಯಿಂದ ಅಥವಾ ಕೋಲುಗಳಿಂದ ಬಡಿ ಯಬೇಕಾದ ವಾದ್ಯಗಳು. ಲೋಹ, ಮರ, ಮಣ್ಣು ಮುಂತಾ ದುವುಗಳಿಂದ ಹೋಳುಗಳನ್ನು ಮಾಡಿಕೊಂಡು ಅವುಗಳಿಗೆ ಬೇರೆ ಬೇರೆ ಪ್ರಾಣಿಗಳ ಚರ್ಮವನ್ನು ಹೊದಿಸಿ ವಾದ್ಯಗಳನ್ನು ಮಾಡಿಕೊಳ್ಳಲಾಗುತ್ತದೆ. ಕೆಲವು ಮುಖ್ಯವಾದ ಚರ್ಮವಾದ್ಯ ಗಳನ್ನು ಇಲ್ಲಿ ಪರಿಚಯಮಾಡಿಕೊಳ್ಳಬಹುದು.

ಹಳ್ಳಿಗಳಲ್ಲಿ ಎಲ್ಲ ಪ್ರಮುಖವಾದ ಸಂದರ್ಭಗಳಲ್ಲಿಯೂ ಬಳಸುವ ವಾದ್ಯ "ತಮ್ಮಟೆ." ಇದನ್ನು ಉತ್ತರ ಕರ್ನಾಟಕದಲ್ಲಿ "ಹಲಗೆ" ಎನ್ನುತ್ತಾರೆ. ಮದುವೆ, ಉತ್ಸವ, ಮರಣ ಸಂದರ್ಭ ಗಳಲ್ಲಿ, ಇತರ ಮೆರವಣಿಗೆಗಳಲ್ಲಿ ತಮ್ಮಟೆ ಇರಲೇಬೇಕು. ನಮ್ಮ ಅತ್ಯಂತ ಪ್ರಾಚೀನ ವಾದ್ಯಗಳಲ್ಲಿ ಇದೂ ಒಂದು. ರಂಗದ

ಹಲಗೆ ಅಥವಾ ತಮ್ಮಟೆ

ಕುಣಿತ, ಪಟ ಕುಣಿತ, ಸೋಮನ ಕುಣಿತ ಮೊದಲಾದ ಅನೇಕ ಬಗೆಯ ಹಳ್ಳಿಯ ಕುಣಿತಗಳಲ್ಲಿ ತಮ್ಮಟೆಯ ಗತ್ತು ಮುಖ್ಯವಾದುದು. ಒಂದುವರೆ ಅಡಿ ಅಗಲದ ಕಬ್ಬಿಣದ ಬಳೆಗೆ ದನದ ಚರ್ಮವನ್ನು ಹೊದಿಸಿ ಈ ವಾದ್ಯವನ್ನು ಮಾಡಿಕೊಳ್ಳಲಾಗುವುದು. ಆಡಿನ ಚರ್ಮವನ್ನು ಬಳಸುವುದೂ ಉಂಟು. ಎರಡು ಕಡ್ಡಿಗಳ ಸಹಾಯದಿಂದ ಈ ವಾದ್ಯವನ್ನು ಬಡಿಯುವರು. "ಜಗ್ಗಣಕ್ಕ", 'ಜಗ್ಗುಣಕ್ಕು' ಎಂದು ನಾದ ಮಾಡುವ ತಮ್ಮಟೆಯ ಗತ್ತಿಗೆ ಯಾರಾದರೂ ಕುಣಿಯಬೇಕೆನಿಸುತ್ತದೆ.

ತಮ್ಮಟೆಯ ಅನಂತರ "ನಗಾರಿ" ಮತ್ತೊಂದು ಮುಖ್ಯ ವಾದ್ಯ. ಇದೊಂದು ಜೋಡಿ ವಾದ್ಯ. ಇದು ರಣವಾದ್ಯವೂ

ನಗಾರಿ

ಹೌದು. ಲೋಹದ ಗುಂಭಗಳಿಗೆ ಚರ್ಮವನ್ನು ಹೊದಿಸಿ ಕಮಾನು ಕಡ್ಡಿಗಳಿಂದ ಬಡಿಯಲಾಗುವುದು. ಬಸವಗಳ ಮೇಲೆ ದೊಡ್ಡ ದೊಡ್ಡ ನಗಾರಿಗಳನ್ನಿಟ್ಟು ಬಡಿಯುವ ವೈಖರಿ ಅದ್ಭುತವಾಗಿರುತ್ತದೆ.

ನಮ್ಮ ರಣವಾದ್ಯಗಳಲ್ಲಿ "ದೋಣು" ಅಥವಾ "ಡೋಲು" ಮುಖ್ಯವಾದುದು. "ಡೊಳ್ಳು ಎನ್ನುವುದೂ ಇದನ್ನೇ. ಇದು ವಿವಿಧ ಗಾತ್ರದಲ್ಲಿ ಕಂಡುಬರುವ ದೊಡ್ಡ ಚರ್ಮವಾದ್ಯ. ಹೊನ್ನೇ ಮರದ ಹೋಳನ್ನು ಕೊರೆದು, ಅದಕ್ಕೆ ಆಡಿನ ಚರ್ಮ ವನ್ನು ಒಂದು ಕಡೆಗೂ, ಹೋತದ ಚರ್ಮವನ್ನು ಬೇರೊಂದು ಕಡೆಗೂ ಹೊದಿಸುವರು. ಬಲಗೈಗೆ ಆಡಿನ ಚರ್ಮ. ಇದು "ಗುಮ್" "ಗುಮ್" ಎಂದು ಶಬ್ದಮಾಡುತ್ತದೆ. ಎಡಗೈಗೆ ಹೋತದ ಚರ್ಮ. ಇದು ಮಂದವಾದ ಚರ್ಮವಾದುದರಿಂದ

ರಮಡೋಲು

ದೊಡ್ಡ ಶಬ್ದವನ್ನು ಕೊಡುತ್ತದೆ. ಇದರ ಹೋಳಿಗಾಗಿ ದೀಪ ಕಣಿಗಲೆ ಅಥವಾ ಬು ಗ ರೀ ಮ ರ ವ ನ್ನು ಬಳಸಬಹುದು. ಕೈಯಲ್ಲೇ ಬಡಿಯುವ ಈ ವಾದ್ಯ ಸುಮಾರು ಮೂರು ಅಡಿ ಉದ್ದವಾಗಿರುತ್ತದೆ. ಈ ಎರಡು ಚರ್ಮಗಳನ್ನೂ ದನದ ಚರ್ಮದ ಬಾರಿನಿಂದ ಎಳೆದು ಕಟ್ಟುವರು. ದೇವರ ಉತ್ಸವ ಗಳಲ್ಲಿ ಈ ವಾದ್ಯವನ್ನು ಬಳಸುವರು.

ದೇವಾಲಯಗಳಲ್ಲಿ ಬಹಳ ದೊಡ್ಡ ಗಾತ್ರದ ಡೊಳ್ಳೊಂದನ್ನು ತೂಗುಹಾಕಿರುತ್ತಾರೆ. ಇದಕ್ಕೆ ಲೋಹದ ಹೋಳನ್ನು ಬಳಸುವರು. ೫ ರಿಂದ ೬ ಅಡಿಯುವರೆಗೆ ಇದು ಉದ್ದವಾಗಿರುತ್ತದೆ. ಮುಖ್ಯವಾಗಿ ಶಿವಾಲಯ ಮತ್ತು ಬೇರೆ ದೇವರ ಗುಡಿಗಳಲ್ಲಿ ಇವುಗಳನ್ನು ಕಾಣಬಹುದು. ದೇವರ ಪೂಜೆ ಆಗುವಾಗ ಈ ಡೊಳ್ಳನ್ನು ಬಡಿಯುವರು. "ರಣಡೋಳು" ಎಂದು ಕರೆಯುವುದು ಇದನ್ನೇ, "ಯಮಡೋಳು" ಎನ್ನುವುದೂ ಉಂಟು. ಇದಕ್ಕೆ ಸಾಮಾನ್ಯವಾಗಿ ಎಮ್ಮೆ ಚರ್ಮವನ್ನು ಬಳಸುವರು. ಕಬ್ಬಿಣದ ಸರಪಳಿಯಿಂದ ಇದನ್ನು ತೂಗು ಹಾಕಿರುತ್ತಾರೆ. ಇದರ ನಾದ ಬಹಳ ದೂರದವರೆಗೂ ಕೇಳಿಬರುತ್ತದೆ. ಪೂಜೆಯ ಸಂದರ್ಭದಲ್ಲಿ ಇತರ ವಿಶೇಷ ಸಂದರ್ಭಗಳಲ್ಲಿ ಇದನ್ನು ಬಡಿಯಲಾಗುವುದು.



ಡೊಳ್ಳು

ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ಬೀರೆ ದೇವರ ಭಕ್ತರಾದ ಕುರುಬರು ಡೊಳ್ಳುಮೇಳವನ್ನು ಮಾಡುತ್ತಾರೆ. ದೊಡ್ಡ ಆಕಾರದ ಡೊಳ್ಳನ್ನು ಸೊಂಟಕ್ಕೆ ಕಟ್ಟಿ, ಅದನ್ನು ಬಡಿಯುತ್ತ ವೀರಾವೇಶದಿಂದ ಕುಣಿಯುವರು. ಬಲ

ಗೈಯಲ್ಲಿ ಒಂದು ಮೊಳದುದ್ದ "ಗುಣಿ" ಎಂಬ ಕೋಲನ್ನು ಹಿಡಿದು ಬಡಿದರೆ, ಎಡಗೈಯಲ್ಲಿ ಕೋಲನ್ನು ಬಳಸದೆ ಹಾಗೆಯೇ ಬಡಿಯುವರು.

ಡೊಳ್ಳುಮೇಳದಲ್ಲಿ ೧೦-೧೨ ಮಂದಿ ಒಟ್ಟಿಗೆ ಕುಣಿಯುವ ಗಂಡುಕಲೆ ಒಂದಾದರೆ, ರಾತ್ರಿಯೆಲ್ಲಾ ಡೊಳ್ಳು ಬಾರಿಸುತ್ತ ಕಥೆಮಾಡುವುದು ಇನ್ನೊಂದು. ಒಬ್ಬ ಕಥೆಗಾರ ನಿಧಾನವಾಗಿ ಡೊಳ್ಳು ಬಾರಿಸಿ ಕಥೆಯನ್ನು ಹೇಳುತ್ತಾ ಸಾಗುತ್ತಾನೆ. ಇನ್ನೊಬ್ಬ ಅದಕ್ಕೆ "ಹಹ್ಞೂ" ಗುಡುತ್ತಾ, "ಹೌದು" ಎನ್ನುತ್ತಾ ತಾನೂ ಬಡಿಯುತ್ತಾನೆ. ಸೊಗಸಾದ ಲಾವಣಿಗಳನ್ನು ಇವರು ಈ ಸಂದರ್ಭದಲ್ಲಿ ಹಾಡುತ್ತಾರೆ.

"ಡೊಳ್ಳು" ಹೇಗೆ ಬಂತು ಎಂಬುದಕ್ಕೆ ಬೀರೆ ದೇವರ ಭಕ್ತರು ಒಂದು ಕಥೆ ಹೇಳುತ್ತಾರೆ: ಒಮ್ಮೆ ಡೊಳ್ಳಾಸುರ ಎಂಬ ರಾಕ್ಷಸ ಶಿವನನ್ನು ಕುರಿತು ತಪಸ್ಸು ಮಾಡಿದ. ಶಿವ ಅವನಿಗೆ ಒಲಿದು "ಏನು ಬೇಕು ಕೇಳು" ಎಂದ. "ನೀನು ಸದಾ ನನ್ನ ಹೊಟ್ಟೆಯಲ್ಲಿ ಇರಬೇಕು" ಎಂದ ಡೊಳ್ಳಾಸುರ. ಸರಿ, ಶಿವ ಅವನ ಹೊಟ್ಟೆಯನ್ನು ಸೇರಿಕೊಂಡ; ದೇವತೆಗಳೆಲ್ಲಾ ಶಿವನನ್ನು ಕಾಣದೆ ಕಂಗಾಲಾದರು. ಕೊನೆಗೆ ಗಣಪತಿ ಶಿವ ಎಲ್ಲಿದ್ದಾನೆ ಎಂದು ತಿಳಿದು, ಡೊಳ್ಳಾಸುರನ ಹತ್ತಿರ ಬಂದ. ಅವನ ಎದುರಿಗೆ ಹಾಡುತ್ತಾ ಕುಣಿಯ ತೊಡಗಿದ. ಡೊಳ್ಳಾಸುರನ ಹೊಟ್ಟೆಯಲ್ಲಿದ್ದ ಶಿವನಿಗೆ ಇದರಿಂದ ಸಂತೋಷವಾಗತೊಡಗಿತು. ಅವನು ಒಳಗೇ ಉಬ್ಬುತೊಡಗಿದ. ಹಾಡನ್ನು ಕೇಳಿ ಕೇಳಿ ದೊಡ್ಡದಾಗಿ ಉಬ್ಬಿಹೋದ. ಡೊಳ್ಳಾಸುರನ ಹೊಟ್ಟೆ ಸೀಳಿ ಹೋಯಿತು. ಶಿವ ಹೊರಗೆ ಬಂದ. ದೇವತೆಗಳಿಗೆ ಪರಮ ಸಂತೋಷವಾಯಿತು. ಆ ಡೊಳ್ಳಾಸುರನ ಚರ್ಮದಲ್ಲೇ ಒಂದು ಡೊಳ್ಳುಮಾಡಿ, ಅದನ್ನು ಬಡಿಯುತ್ತ ಶಿವನ ಎದುರಿಗೆ ಕುಣಿ

ದರು. ಶಿವ ಪ್ರಸನ್ನನಾದ. ಈಗಲೂ ಕೂಡ ಶಿವನನ್ನು ಅಥವಾ ಬೀರೇಶ್ವರನನ್ನು ಸಂತೋಷಪಡಿಸಲು ಈ ಡೊಳ್ಳನ್ನು ಬಡಿಯಲಾಗುತ್ತದೆ.



ಹರೆ

ಚರ್ಮವಾದ್ಯಗಳಲ್ಲಿ "ಹರೆ" ಕೂಡ ಒಂದು ವಿಶಿಷ್ಟ ವಾದ್ಯ. ಬೀದಿಯ ಮಾರಿ ಅಥವಾ ಗೂಡೆಯ ಮಾರಿಯನ್ನು ಹೊತ್ತುಕೊಂಡು ಬೀದಿಗಳಲ್ಲಿ ಬರುವವರನ್ನು ನೋಡಿಲ್ಲವೆ? ಇವರಲ್ಲಿ ಒಬ್ಬ "ಉರುಮ್" "ಉರುಮ್" ಎಂದು ಶಬ್ದ ಮಾಡುವ ಚರ್ಮವಾದ್ಯವನ್ನು ಸೊಂಟಕ್ಕೆ ಕಟ್ಟಿಕೊಂಡಿರುತ್ತಾನೆ. ಈ ಶಬ್ದಮಾಡುವುದರಿಂದಲೇ ಈ ವಾದ್ಯವನ್ನು 'ಉರುಮೆ' ಎಂದು ಕೆಲವು ಕಡೆ ಕರೆಯುತ್ತಾರೆ. ಎಡಗೈಯಲ್ಲಿ ಬಾಗಿದ ಒಂದು ಕಡ್ಡಿ ಇರುತ್ತದೆ. ಈ ಕಡ್ಡಿಯಿಂದ ಉಜ್ಜಿದರೆ 'ಉರುಮ್' 'ಉರುಮ್' ಎಂಬ ಶಬ್ದ ಬರುತ್ತದೆ. ಬಲಗೈಯಲ್ಲಿ ಹಿಡಿದ ಕಡ್ಡಿಯಿಂದ ಬಡಿಯುತ್ತಾರೆ. ಬಡಿಯುವುದು, ಉಜ್ಜುವುದು ಈ ವಾದ್ಯದ ವೈಶಿಷ್ಟ್ಯ. ಇದರ ನಾದದ ಗತ್ತಿಗೆ ದೇವತೆ ಒಲಿಯುತ್ತಾಳೆ. ನಾವು ಕೇಳಿದರೆ ರೋಮಾಂಚನವಾಗುತ್ತದೆ.

ಹರೆಗೆ ಹೊದಿಸುವ ಚರ್ಮ ಮೇಕೆಯ ಮರಿಯದು. ಉಜ್ಜಲು ಈಚಲ ಕಡ್ಡಿಯನ್ನು, ಬಡಿಯಲು ಹಂಗರ ಕಡ್ಡಿಯನ್ನೂ ಬಳಸುವರು. ಹರೆಯ ಹೋಳು ಮರದಲ್ಲಿ ಇರಬಹುದು. ಕೆಲವೊಮ್ಮೆ ಕಂಚು ಮತ್ತು ಹಿತ್ತಾಳೆಗಳ ಮಿಶ್ರಣವೂ ಇರಬಹುದು. ಕಂಚಿನ ಹೋಳೂ ಇರುತ್ತದೆ. ಇದನ್ನು ಕಂಚಿನ ಹರೆ ಎನ್ನುತ್ತಾರೆ. "ಕಹಳೆ, ಹರೆ, ಕೊಂಬುಗಳ ಏಳಿ ಮೊಳಗಿ ಏಳಿ" ಎಂಬ ಶ್ರೀಯುವರ ರಣಗೀತೆಯನ್ನು ಕೇಳಿಲ್ಲವೆ ? ಕಹಳೆ, ಹರೆ, ಕೊಂಬು ಇವೆಲ್ಲ ರಣವಾದ್ಯಗಳು. ದೊಡ್ಡ ದೊಡ್ಡ ಗ್ರಾಮದೇವತೆಯ ದೇವಾಲಯಗಳಲ್ಲಿ ಈ ಕಂಚಿನ ಹರೆಗಳಿರುತ್ತವೆ. ದೇವತೆಯ ದೂತರಾದ ಸೋಮಗಳು ದೇವರ ಉತ್ಸವ ಹೊರಟಾಗ ಈ ಕಂಚಿನ ಹರೆಯ ನಾದಕ್ಕೆ ತಕ್ಕಂತೆ, ವೈಯಾರದಿಂದ ಕುಣಿಯುತ್ತವೆ. "ಸೋಮ" ಎಂದರೆ ದೊಡ್ಡ ಮುಖವಾಡಗಳನ್ನು ಧರಿಸಿ ಕುಣಿಯುವ ವ್ಯಕ್ತಿಗಳು. ಇವರು ದೇವತೆಯ ಉತ್ಸವ ಹೊರಟಾಗ ಓಲಗ, ತಮ್ಮಟೆ, ಡೋಲು, ಹರೆ, ತಾಳ ಮುಂತಾದುವುಗಳ ಮೇಳಕ್ಕೆ ಆಕರ್ಷಕವಾಗಿ ಇವರು ಕುಣಿಯುವರು. ಇಲ್ಲಿ ಕಂಚಿನ ಹರೆ ಮುಖ್ಯವಾದ ವಾದ್ಯ.

ಕರಾವಳಿ ಪ್ರದೇಶಗಳಲ್ಲಿ ಚಂಡೆ ಎಂಬ ಚರ್ಮವಾದ್ಯವನ್ನು ವಿಶೇಷವಾಗಿ ಬಳಸುತ್ತಾರೆ. ಇದನ್ನು ಹಲಸು ಅಥವಾ ಕಾಚಿ ಮರದಲ್ಲಿ ಮಾಡಿಕೊಳ್ಳುವರು. ದನದ ಚರ್ಮ ಹೊದಿಸುವರು. ಬಡಿಯಲು ಮರದ ಬೇರಿನ ಕಡ್ಡಿಯನ್ನು ಬಳಸುವರು. ಎಲ್ಲ ಮಂಗಳ ಸಂದರ್ಭಗಳಲ್ಲಿಯೂ ಇದು ಇರಬೇಕು. ಯಕ್ಷಗಾನ ಬಯಲಾಟಗಳಲ್ಲಿ ಇದರ ಬಳಕೆ ಹೆಚ್ಚು. ಯಕ್ಷಗಾನ ಆರಂಭವಾಗುವ


ಚಂಡೆ

ಮುನ್ನ ಇದನ್ನು ಬಡಿದರೆ ನಾದ ಬಹುದೂರದವರೆಗೆ ಕೇಳಿಬರುತ್ತದೆ. ಅನಂತರ ಯಕ್ಷಗಾನದ ಉದ್ದಕ್ಕೂ ವಿಶಿಷ್ಟ ಸಂದರ್ಭಗಳಲ್ಲಿ ಇದನ್ನು ಎರಡು ಕಡ್ಡಿಗಳ ಸಹಾಯದಿಂದ ಬಡಿಯಲಾಗುತ್ತದೆ. ಇದು ಯಕ್ಷಗಾನದ ಸನ್ನಿವೇಶಗಳಿಗೆ ವಿಶೇಷ ಪರಿಣಾಮವನ್ನು ತರುತ್ತದೆ.

ಮದ್ದಲೆ ಅಥವಾ ಮೃದಂಗ ನಮ್ಮ ಚರ್ಮವಾದ್ಯಗಳಲ್ಲಿ ಮುಖ್ಯವಾದುದು. ಇದನ್ನು ಶಾಸ್ತ್ರೀಯ ನಾಟ್ಯಗಳಲ್ಲಿಯೂ ಬಳಸುತ್ತಾರೆ. ಯಕ್ಷಗಾನ, ಬಯಲಾಟಗಳಲ್ಲಂತೂ ಇದು ತೀರ ಅವಶ್ಯಕವಾದ ವಾದ್ಯ. ಇದರಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಹೋದಂತೆ ಆಕಾರ ವ್ಯತ್ಯಾಸವಾಗುತ್ತದೆ. ಯಕ್ಷಗಾನದ ಎಲ್ಲ



ಮದ್ದಲೆಗಳು

ಸಂಪ್ರದಾಯಗಳಲ್ಲೂ ಈ ಮದ್ದಲೆ ಇರಲೇ ಬೇಕು. ಮೂಡಲ ಪಾಯ, ಪಡವಲಪಾಯ ಎರಡು ಸಂಪ್ರದಾಯದಲ್ಲೂ ಭಾಗವತರು ಇದನ್ನು ಕಟ್ಟಿಕೊಂಡು ವೇಷಧಾರಿಗಳನ್ನು ಕುಣಿಸುತ್ತಾರೆ. ಮದ್ದಲೆಯ ಗತ್ತಿಗೆ ತಕ್ಕಂತೆ ಅವರು ಹೆಜ್ಜೆಹಾಕುತ್ತಾರೆ. ಮದ್ದಲೆಯನ್ನು ಹಲಸಿನ ಮರದಲ್ಲಿ ಮಾಡಿಕೊಳ್ಳುತ್ತಾರೆ. ಆಡಿನ ಚರ್ಮವನ್ನು ಹೊದಿಸುತ್ತಾರೆ. ಒಂದು ಕಡೆಯ ಚರ್ಮಕ್ಕೆ ಕರ್ಣೆ ಎಂಬ ಮದವನ್ನು ಬಳಿಯುತ್ತಾರೆ. ಇದು ನಾದದಲ್ಲಿ ವೈವಿಧ್ಯವನ್ನು ತರುತ್ತದೆ.

"ಗುಮ್ಮಟೆ" ವಾದ್ಯದಲ್ಲಿ ಮಣ್ಣಿನ 'ಹೋಳನ್ನು' ಬಳಸುತ್ತಾರೆ. ಉದ್ದವಾದ ಮಣ್ಣಿನ ಹೋಳಿಗೆ ಮೇಕೆ ಅಥವಾ ಹುಲ್ಲೆಯ ಚರ್ಮವನ್ನು ಹೊದಿಸುವರು. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಗೌಡರಲ್ಲಿ 2–3 ಅಡಿ ಉದ್ದದ ಗುಮ್ಮಟೆ ವಾದ್ಯ ಕಂಡುಬರುತ್ತದೆ. ಇದನ್ನು ಬಡಿದುಕೊಂಡು ಅವರು ಲಾವಣಿಗಳನ್ನು ಹಾಡುತ್ತಾರೆ ; ಮೇಳಮಾಡುತ್ತಾರೆ.

ದಕ್ಷಿಣ ಕನ್ನಡಕ್ಕೆ ಬಂದರೆ ಅದು ಗಡಿಗೆಯ ಆಕಾರವನ್ನು ತಾಳುತ್ತದೆ. ಹಳೆಯ ಮೈಸೂರು ಭಾಗದಲ್ಲಿ ಇನ್ನೂ ಕಿರಿದಾಗಿ ಕಾಣಬರುತ್ತದೆ. ಕರಪಾಲ ಮೇಳದಲ್ಲಿ, ತಂಬೂರಿ ಮೇಳದಲ್ಲಿ ಈ ವಾದ್ಯದ ಬಳಕೆ ಹೆಚ್ಚು. ತಂಬೂರಿ ಮೇಳದ ಗುಮ್ಮಟೆಯನ್ನು "ಗುಮ್ಮಿ" ಎನ್ನುತ್ತಾರೆ. ಇದೊಂದು ಪುಟ್ಟವಾದ್ಯ. ಆದರೆ ಸೊಗಸಾದ ನಾದವನ್ನುಂಟುಮಾಡುತ್ತದೆ. ಕರಪಾಲ ಮೇಳದಲ್ಲಿ ಒಬ್ಬಾತ ಇದನ್ನು ಸೊಂಟಕ್ಕೆ ಕಟ್ಟಿಕೊಂಡು, ಬಡಿಯುತ್ತ ಇತರರೊಡನೆ ಕುಣಿಯುತ್ತಾನೆ. ಒಂದು ಕಡೆ ಇದರ ಬಾಯಿ ಕಿರಿದಾಗಿದ್ದು ತೆರವಾಗಿರುತ್ತದೆ. ಮತ್ತೊಂದು ಕಡೆ ಚರ್ಮದಿಂದ ಮುಚ್ಚಲಾಗಿರುತ್ತದೆ. ಗುಮ್ಮಟೆಯನ್ನು ಸಾಮಾನ್ಯವಾಗಿ ಕೈಯಲ್ಲಿ ಮಾತ್ರ ಬಡಿಯಲಾಗುವುದು. ಒಮ್ಮೆ ಕೈಯಲ್ಲಿ



ಸಾಧಾರಣ ಗುಮ್ಮಟೆ (ಉ. ಕ.)



ಕರಪಾಲದ ಗುಮ್ಮಟೆ

ದಕ್ಷಿಣ ಕನ್ನಡದ ಗುಮ್ಮಟೆ

ಗುಮ್ಮಟೆ ತಂಬೂರಿ ಮೇಳ

ಬಡಿದು ಇನ್ನೊಂದು ಕೈಯಲ್ಲಿ ತೆರವಾದ ಬಾಯನ್ನು ಮುಚ್ಚಿ ಮುಚ್ಚಿ ತೆಗೆದರೆ ವಿಶಿಷ್ಟ ನಾದ ಬರುತ್ತದೆ.

"ಟಕೂರಿ" ವಾದ್ಯ ಒಂದು ಪುಟ್ಟ ನಗಾರಿಯ ಆಕಾರ ದಲ್ಲಿರುತ್ತದೆ. ಇದನ್ನು ಜನಪದ ಮೇಳಗಳಲ್ಲಿ ಬಳಸುತ್ತಾರೆ. ಸೊಂಟಕ್ಕೆ ಕಟ್ಟಿಕೊಂಡು ಕಡ್ಡಿಗಳಿಂದ ಇದನ್ನು ಬಡಿಯಲಾಗು

ತ್ತದೆ. ಮಣ್ಣಿನ ಜೋಡಿ ಪಾತ್ರೆಗಳಿಗೆ ಚರ್ಮವನ್ನು ಹೊದಿಸಿ ಮಾಡಿದ ಕಿರುವಾದ್ಯವೇ "ಟಕೂರಿ". ಎರಡು ಬಾಗಿದ ಕಡ್ಡಿಗಳಿಂದ ಇದನ್ನು ಬಡಿಯಲಾಗುವುದು. ಇದರ ಹೆಸರೇ ಸೂಚಿಸುವಂತೆ ಇದು ಟಕು ಟಿಕು ಟಕು ಎಂದು ಅಧ್ಭುತ ರೀತಿಯ ಶಬ್ದವನ್ನುಂಟುಮಾಡುತ್ತದೆ. ವಾದ್ಯ ಮೇಳ ಗಾನದಲ್ಲಿಯೂ ಇವನ್ನು ಬಾರಿಸುತ್ತಾರೆ.



ಟಕೂರಿ

ಸಮೇಳ

ಟಕೂರಿ ವಾದ್ಯವನ್ನು ಹೋಲುವ ಆದರೆ ಅದಕ್ಕಿಂತಲೂ ಆಕಾರದಲ್ಲಿ ದೊಡ್ಡದಾದ ವಾದ್ಯವೇ "ಸಮೇಳ". "ಚಮೇಳ" ಎಂದೂ ಇದನ್ನು ಕರೆಯಲಾಗುವುದು. ಕಂಚು,ಮಣ್ಣು ಮತ್ತು ಮರದಲ್ಲಿ ಇದರ ಹೋಳನ್ನು ಮಾಡಿಕೊಳ್ಳಲಾಗುವುದು. ಎಡ ಭಾಗದಲ್ಲಿ ದೊಡ್ಡ ಹೋಳನ್ನೂ ಬಲಭಾಗದಲ್ಲಿ ಸಣ್ಣ ಹೋಳನ್ನೂ ಬಳಸುವರು. ಎರಡು ಹೋಳುಗಳ ನಡುವೆ ಕೆಲವೊಮ್ಮೆ ಒಂದು ತಾಳವನ್ನು ಅಳವಡಿಸುವರು. ಕರಡೆ ಮಜಲು, ಗೊಂದಲಿಗರ ಮೇಳ, ಚಿಟ್‌ಮೇಳ, ವೀರಗಾಸೆ ಮೇಳ ಮೊದಲಾದ ವಾದ್ಯ ಪ್ರಧಾನ ಮೇಳಗಳಲ್ಲಿ ಇದನ್ನು ಬಳಸುವರು.

ನಮ್ಮ ಪ್ರಾಚೀನ ಚರ್ಮವಾದ್ಯಗಳಲ್ಲಿ 'ಕರಡೆ' ಕೂಡ ಒಂದು. ಹೊನ್ನೆ, ಬುಗರಿ, ದೀಪಗಣಿಗಲೆ, ತೆಂಗು ಮೊದಲಾದ ಮರಗಳಲ್ಲಿ ಇದರ ಹೋಳನ್ನು ಮಾಡಿಕೊಳ್ಳುವರು. ಸುಮಾರು

1 ರಿಂದ $1\frac{1}{2}$ ಅಡಿ ಉದ್ದದ ಈ ವಾದ್ಯ ಚಂಡೆಯಷ್ಟೇ ನಾದದ ಪರಿಣಾಮವನ್ನು ತರಬಲ್ಲುದು. ಇಲ್ಲಿಯೂ ಆಡಿನ ಚರ್ಮವನ್ನೇ ಬಳಸುವರು. "ಕರಡೆ ಮಜಲು" ಶಬ್ದ ಈ ವಾದ್ಯದಿಂದಲೇ ಬಂದದ್ದು. ಎಲ್ಲ ಪ್ರಮುಖ ವಾದ್ಯಮೇಳಗಳಲ್ಲೂ ಈ ವಾದ್ಯ ಇದ್ದೇ ಇರಬೇಕು. ಇದನ್ನು ಬಯಲು ನಾಡಿನ ಚಂಡೆ ಎನ್ನಬಹುದು.



ಕರಡೆ ಡೊಳ್ಳು

ಚರ್ಮವಾದ್ಯಗಳಲ್ಲಿ ಡಮರುಗದ ಜಾತಿಗೆ ಸೇರಿದ ವಾದ್ಯಗಳೂ ಗಮನಾರ್ಹವಾದುವು. ತಾಂಡವ ನೃತ್ಯದಲ್ಲಿ ಶಿವ ಡಮರುಗವನ್ನು ನುಡಿಸುತ್ತ ಕುಣಿಯುವನೆನ್ನುತ್ತಾರೆ. ಡಮರುಗ ಶಿವನ ವಾದ್ಯ. ಜನಪದ ಕಲಾವಿದರೂ ಇದನ್ನು ಬಳಸುತ್ತಾರೆ. ಮುಖ್ಯವಾಗಿ ಗೊರವರು ಈ ವಾದ್ಯವನ್ನು ಬಳಸಿ ಮೇಳಗಳನ್ನು ನಡೆಸುತ್ತಾರೆ. ಹಿತ್ತಾಳೆ ಹೋಳಿಗೆ ಎರಡೂ ಕಡೆ ಆಡಿನ ಚರ್ಮವನ್ನು ಹೊದಿಸಿ, ಹುರಿಯಿಂದ ಇದನ್ನು ನುಡಿಸಲಾಗುವುದು. ಎರಡೂ ಕಡೆಯ ಬಾಯಿಗೆ ಕಣಿಗಲ ಕಡ್ಡಿಯನ್ನು ಬಾಗಿಸಿ ಬಿಗಿಯುವರು. ಕೈಯಲ್ಲಿ ಹಿಡಿದು ಆಕಡೆ ಈಕಡೆ ಕ್ರಮವಾಗಿ ಆಡಿಸಿದ ಹುರಿಯ ತುದಿಯ ಗಂಟು ತಾಗಿ ನಾದ ಬರುತ್ತದೆ.

ಡಮರುಗದ ಜಾತಿಗೇ ಸೇರಿದ ಕಿರುವಾದ್ಯ ಬುಡು ಬುಡುಕೆ. ಬಿಲ್ವಪತ್ರೆಯ ಕಾಯಿಯ ಎರಡು ಹೋಳನ್ನು ಕೂಡಿಸಿ ಇದನ್ನು ಮಾಡಿಕೊಳ್ಳಲಾಗುವುದು. ಲೋಹದ ಹೋಳೂ ಬಳಕೆಯಲ್ಲುಂಟು. ಕಪ್ಪೆಯ ಚರ್ಮವನ್ನು ಇದಕ್ಕೆ ಹೊದಿಸುವರು.

ಬುಡುಬುಡಿಕೆಯುವನು ಹಾಲಕ್ಕಿ ಶಕುನ ಹೇಳಬೇಕಾದರೆ, ಭವಿಷ್ಯ ಹೇಳಬೇಕಾದರೆ ಈ ವಾದ್ಯವನ್ನು ನುಡಿಸುತ್ತಾನೆ.



ಡಮರುಗ



ಬುಡಬುಡಿಕೆ

ಡಮರುಗ ಮತ್ತು ಬುಡುಬುಡಿಕೆಯ ಆಕಾರವನ್ನೇ ಹೋಲುವ ಆದರೆ ಕೈಯಲ್ಲಿ ಬಡಿಯುವ "ಢಕ್ಕೆ"ಯನ್ನು ನೀಲಗಾರರು ಬಳಸುವರು. ಕಡ್ಡಿಯಿಂದ ಬಡಿಯುವ ಢಕ್ಕೆಗಳೂ ಉಂಟು. ದೇವಾಲಯಗಳಲ್ಲಿ ಪೂಜೆಯಾಗುವಾಗ ಈ ವಾದ್ಯಗಳನ್ನು ಬಳಸಲಾಗುವುದು. ಮರದ ಅಥವಾ ಲೋಹದ ಹೋಳುಗಳನ್ನು ಈ ವಾದ್ಯಕ್ಕೆ ಬಳಲಾಸಗುತ್ತದೆ. ಇದು ಸುಮಾರು ಒಂದು ಅಡಿಯಷ್ಟು ಉದ್ದವಾಗಿರುತ್ತದೆ.

"ಕುಣಿಮಿಣಿ" ಎಂಬ ವಾದ್ಯ ನಮ್ಮ ಚಿಕ್ಕ ವಾದ್ಯಗಳಲ್ಲಿ ಒಂದು. ಇದಕ್ಕೆ ಒಂದು ಕಡೆ ತಾಮ್ರದ ತಗಡನ್ನೂ ಇನ್ನೊಂದು ಕಡೆ ಹಿತ್ತಾಳೆ ತಗಡನ್ನೂ ಬಳಸುವರು. ಆಡಿನ ಚರ್ಮವನ್ನು ಹೊದಿಸುವರು. ಕಣಿಗಲ ಕಡ್ಡಿಯಲ್ಲಿ ಬಡಿಯು



ಕುಣಿ ಮಿಣಿ

ವರು. "ಕಣಿ ಕಣಿ" ನಾದ ಇದರಲ್ಲಿ ಬರುವುದರಿಂದ "ಕುಣಿಮಿಣಿ" ವಾದ್ಯ ಎಂದೇ ಕರೆಯುುವರು. ಇದನ್ನು ಕೊರಳಿಗೆ ಕಟ್ಟಿ ಕೊಂಡು ಬಡಿಯುುವರು.

ಚರ್ಮವಾದ್ಯಗಳಲ್ಲಿ "ತಾಸೆ" ಅಥವಾ ಚಕ್ರ ವಾದ್ಯ ಕೂಡ ಮುಖ್ಯವಾದುದು. ಇವೆರಡೂ ಒಂದೇ ಆಕಾರದ ವಾದ್ಯ ಗಳಾದರೂ ಇವುಗಳ ಬಳಕೆ ಬೇರೆ ಬೇರೆ ಕಡೆ ಕಂಡುಬರುತ್ತದೆ. ತಾಸೆ ದಕ್ಷಿಣ ಕನ್ನಡದಲ್ಲಿ ಕಂಡುಬಂದರೆ, ಚಕ್ರವಾದ್ಯ ಹಳೇ ಮೈಸೂರು ಭಾಗದಲ್ಲಿ ಕಂಡುಬರುತ್ತದೆ. ತಾಸೆಗೆ ಬಳಸುವ ಹೋಳು ಲೋಹದ್ದು. ಒಂದು ಕಡೆ ಮಾತ್ರ ಚರ್ಮವನ್ನು ಹೊದಿಸಲಾಗುವುದು.



ತಾಸೆ



ಚಕ್ರವಾದ್ಯ

ಚಕ್ರವಾದ್ಯ ಬಯಲು ಸೀಮೆಯ ಕೆಲವು ಕಡೆಗಳಲ್ಲಿ ಕಂಡುಬರುತ್ತದೆ. ಮಣ್ಣಿನ ಹೋಳಿಗೆ ಇಲ್ಲಿ ಚರ್ಮವನ್ನು ಹೊದಿಸಲಾಗುವುದು. ಮಾರಿ ಕುಣಿತದವರು ಈ ವಾದ್ಯದ ಗತ್ತಿಗೆ ಕುಣಿಯುತ್ತಾರೆ. ಒಬ್ಬ ಮುಂದಾಳು ತನ್ನ ತೊಡೆಗಳ ಮೇಲೆ ಇಟ್ಟುಕೊಂಡು ಎರಡು ಕೈಗಳಲ್ಲೂ ಇದನ್ನು ಬಡಿಯು ತ್ತಾನೆ. ವಿವಿಧ ಗತ್ತಿನಲ್ಲಿ ದೇವರ ಗುಡ್ಡರು ಕುಣಿದು ಕೇಕೆ ಹಾಕುತ್ತಾರೆ.

"ಕಲ್ಗಿ-ತುರಾ" ಲಾವಣಿ ಸಂಪ್ರದಾಯದಲ್ಲಿ ಬಳಸುವ ಬಡಿಯುವ ವಾದ್ಯ "ದಪ್ಪು." ಇದು ತಮ್ಮಟೆಯನ್ನು ಹೋಲುವ ಚಕ್ರಾಕಾರದ ವಾದ್ಯ. "ಕಡ" ಎಂಬ ಹೆಸರೂ ಇದಕ್ಕೆ ರೂಢಿಯಲ್ಲಿದೆ. ಇದನ್ನು ಕೈಯಲ್ಲಿ ಬಡಿದುಕೊಂಡು ವಿವಿಧ ಗತ್ತಿನಲ್ಲಿ ಲಾವಣಿಕಾರರು ಹಾಡುತ್ತಾರೆ. ಇದರ ಗುಂಪಿಗೇ ಸೇರುವ "ದಮ್ಮಡಿ" ಜನಪದ ಮೇಳಗಳಲ್ಲಿ, ಭಜನೆ ಗಳಲ್ಲಿ, ತತ್ವಪದಗಳಲ್ಲಿ ಕಂಡುಬರುತ್ತದೆ. ಅಂಗೈ ಅಗಲದ ಈ ವಾದ್ಯ ಒಳ್ಳೆಯ ಗತ್ತನ್ನು ನೀಡಿ ವಿವಿಧ ಹಾಡುಗಾರಿಕೆಗೆ, ಕುಣಿತಗಳಿಗೆ, ಶೋಭೆಯನ್ನು ತರುತ್ತದೆ. ಮರದ ಬಳೆಗೆ ನಡು ನಡುವೆ ಗಗ್ಗರಗಳನ್ನು ಅಳವಡಿಸಿ ನಾದ ವೈವಿಧ್ಯವನ್ನು ತರ



ದಮ್ಮಡಿ



ದಪ್ಪು

ಲಾಗುತ್ತದೆ. ಉಡದ ಚರ್ಮವನ್ನು ಬಳಸಿ ಈ ವಾದ್ಯವನ್ನು ಮಾಡಿಕೊಳ್ಳಲಾಗುವುದು.

"ಡೋಲು" ಹಾವಾಡಿಗರು ಬಡಿಯುವ ವಾದ್ಯ. ಜನರನ್ನು ಆಕರ್ಷಿಸಲು, ಸಣ್ಣಸಣ್ಣ ಕೈಚಳಕವನ್ನು ತೋರಲು, ಇತರ ಮೋಡಿಗಳನ್ನು ತೋರಲು ಇವರು ಈ ಡೋಲನ್ನು



ಡೋಲು

ಬಳಸುತ್ತಾರೆ. ತೆಳುವಾದ ಮರದ ಹೋಳಿಗೆ ಚರ್ಮವನ್ನು ಹೊದಿಸಿ ಈ ವಾದ್ಯವನ್ನು ಮಾಡಿಕೊಳ್ಳುವರು. ಚರ್ಮ ವಾದ್ಯಗಳಲ್ಲಿ ಅಪಾರ ಬಗೆಗಳುಂಟು. ಡಂಕ, ಡವಣೆ ಮೊದಲಾದ ಅನೇಕ ವಾದ್ಯಗಳನ್ನು ಮಂಗಳ ಕಾರ್ಯಗಳಲ್ಲಿ ಬಳಸುವರು.

ಬುಡುಬುಡಿಕೆ ಜನಪದ ಸಂಪ್ರದಾಯದ ಅತ್ಯಂತ ಚಿಕ್ಕ

ಚರ್ಮವಾದ್ಯ. ಬುಡುಬುಡಿಕೆಯುವರು ಮರಾಠಿ ಮೂಲದ ಜನ. ಇವರು ತಮ್ಮ ವಾದ್ಯವಾದ ಬುಡುಬುಡಿಕೆಯನ್ನು ಹಿಡಿದು ಶಕುನ ನುಡಿಯುತ್ತಾರೆ. ಇದು ಬಿಲ್ವಪತ್ರೆಕಾಯಿಯ ಹೋಳುಗಳಿಗೆ ಕಪ್ಪೆ ಚರ್ಮವನ್ನು ಅಳವಡಿಸಿ ಮಾಡಿಕೊಂಡ ವಾದ್ಯ.

ನಮ್ಮ ಜನಪದ ವಾದ್ಯಗಳು ವೈವಿಧ್ಯವಾದುವು ಮತ್ತು ವಿಪುಲವಾದುವು. ಪರಿಶೋಧಿಸುತ್ತಾ ಹೋದಂತೆ ಇನ್ನೂ ಅಪಾರ ಸಂಖ್ಯೆಯಲ್ಲಿ ಈ ವಾದ್ಯಗಳು ಲಭ್ಯವಾಗುತ್ತವೆ. ಆಯಾ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಬೇರೆ ಬೇರೆ ಸಂಪ್ರದಾಯಗಳಿಗೆ ಸಂಬಂಧಪಟ್ಟಂತೆ ಎಷ್ಟೋ ವಾದ್ಯಗಳು ಕಂಡುಬರುತ್ತವೆ. ಬಹುಮಟ್ಟಿನ ವಾದ್ಯಗಳು ಧಾರ್ಮಿಕ ಹಿನ್ನೆಲೆಯನ್ನು ಪಡೆದುಕೊಂಡಿವೆ. ಕೆಲವು ಲೌಕಿಕ ವಾದ್ಯಗಳು. ಜನಪದ ವಾದ್ಯ-ಸಂಗೀತ ಈ ಎರಡು ಸಂಪ್ರದಾಯಗಳ ಹಿನ್ನೆಲೆಯಲ್ಲಿ ಕಂಡುಬರುತ್ತದೆ. ಜನಪದವಾದ್ಯಗಳನ್ನೂ, ಜನಪದ ಕಲಾವಿದರನ್ನೂ ಗುರುತಿಸಿ ಈ ಸಂಗೀತ ಪರಂಪರೆ ಉಳಿಯುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ.

—o—

ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ
1980ರ ಪ್ರಕಟಣೆಗಳು

ಕರ್ನಾಟಕದ ಜನಪದ ವಾದ್ಯಗಳು	ಡಾ. ಜಿ. ಶಂ. ಪರಮಶಿವಯ್ಯ
ಎಂ. ಎಚ್. ಕೃಷ್ಣ	ಕೆ. ಜಿ. ನಾಗರಾಜನ್
ಎಸ್. ಶ್ರೀಕಂಠಶಾಸ್ತ್ರಿ	ಎಸ್. ಆರ್. ಕೃಷ್ಣಮೂರ್ತಿ
ಪಿ. ಆರ್. ರಾಮಯ್ಯ	ಎಸ್. ಆರ್. ಕೃಷ್ಣಮೂರ್ತಿ
ಕರ್ನಾಟಕ ವ್ಯವಸಾಯ ಉಪಕರಣಗಳು	ಹ. ಕ. ರಾಜೇಗೌಡ
ಕರಪಾಲದವರು	ಡಾ. ಡಿ. ಕೆ. ರಾಜೇಂದ್ರ
ಸ್ವಾದಿ	ಗೋಪಾಲಕೃಷ್ಣ ಹೆಗಡೆ
ಮುಂಡಾಜೆ ರಂಗನಾಥ ಭಟ್ಟರು	ಕೆ. ಎನ್. ಭಟ್, ಶಿರಾಡಿಪಾಲ್
ರಾಜ ಒಡೆಯರು	ಬ. ನ. ಸುಂದರರಾವ್
ಸಿ. ಬಿ. ಮಲ್ಲಪ್ಪ	ಎಂ. ವಿ. ನಾಗರಾಜರಾವ್
ಕಿನ್ನರಿ ಜೋಗಿಗಳು	ಡಾ. ಜಿ. ಶಂ. ಪರಮಶಿವಯ್ಯ
ಕ್ಷಮಾಪತಿ ರಾಮರಾಯ	ಡಾ. ಶಿವಾನಂದ ಗುಬ್ಬಣ್ಣನವರ್
ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ	ಟಿ. ಆರ್. ನಾಗಪ್ಪ
ಹಾಲಕ್ಕಿ ಒಕ್ಕಲಿಗರು	ಎಲ್. ಜಿ. ಭಟ್
ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ	ವಿ. ಎಸ್. ನಾರಾಯಣರಾವ್
ರಣವಾದ್ಯಗಳು	ಡಾ. ಕೆ. ಶ್ರೀಕಂಠಯ್ಯ
ಬಂದಾನವಾಜ್	ಜಯತೀರ್ಥ ರಾಜಪುರೋಹಿತ
ಸಚ್ಚಿದಾನಂದೇಂದ್ರ ಸ್ವಾಮಿಗಳು	ಎನ್. ಎಸ್. ರಾಮಪ್ರಸಾದ್


IBH
ಗಂಧದ ನಾಡು ಮತ್ತು ಕನ್ನಡಿಗರ ಚರಿತ್ರೆ
ಐ ಬಿ ಎಚ್ ಪ್ರಕಾಶನ
ಬೆಂಗಳೂರು
402